ಯಕ್ಷಗಾನ



ಅಂಬಿಕಾ ಮಹಾತ್ಮೆ

ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್

ಶ್ರೀ ಗೋಪಾಲಕೃಷ್ಣ ಪ್ರಕಾಶನ
ದೇಲಂಪಾಡಿ

ಕಾಸರಗೋಡು ತಾಲೂಕು

Scanned by CamScanner

ಲೇಖಕರ ಪ್ರಕಟಿತ ಕೃತಿಗಳು

ಯಕ್ಷಗಾನ-

ಕರ್ಣಾವಸಾನ (ಅರ್ಥಸಹಿತ)	ರೂ.	3-00
ಅಮೋಘವರ್ಷ ನೃಪತುಂಗ	ರೂ.	4-00
ಕಲ್ಪಸುಂದರೀ ಕಲ್ಯಾಣ	ರೂ.	2-00
ಶಿವನಾಮ ಮಹಿಮೆ	ರೂ.	4-00
ಸೀತಾ ಪರಿತ್ಯಾಗ	ರೂ.	2-50
ಕನಕಲೇಖಾ	ರೂ.	3-00
ಖರಾಸುರ ವಧೆ (ಅರ್ಥಸಹಿತ)	ರೂ.	2-50
ಭೀಮಶಂಕರ ಮಹಿಮೆ	ರೂ.	3-00
ಪಾಂಚಜನ್ಯ	ರೂ.	3-00
ಬ್ರಹ್ಮಯಜ್ಞ	ರೂ.	4-00
ರಕ್ಷಾಕವಚ (ತುಲಸಿ ಶಂಖಚೂಡ)	ರೂ.	6-00
ಊರ್ವಶಿ-ಪುರೂರವ	ರೂ.	3-00
ಮಿತ್ರಗುಪ್ತ ವಿಜಯ	ರೂ.	3-00
ಹರಿರತ್ನಹಾರ	ರೂ.	4-00
ಶ್ರೀರಾಮ ಪಟ್ಟಾಭಿಷೇಕ	ರೂ.	15-00
ಅಂಬಿಕಾ ಮಹಾತ್ಮ್ಯೆ	ರೂ.	5-00

ಕಾದಂಬರಿ_

ಕರವಸ್ತ್ರ	ರೂ.	3-00

ಕಾವ್ಯ-

ವಿಷ್ಣು ಶರಣನ ದರ್ಪಣ	ರೂ.	1-25



1913 — 1986

Scanned by CamScanner

AMBIKA MAHATME-A Yakshagana Play in Kannada by Keerikkad Master Vishnu Bhat, Nisarga Kala Nilaya, Guddadka, Sullia, Da. Ka.

Published by; Sri Gopalakrishna Prakashana
Delampady, Kasaragod Taluk.

Price Rs. 5-00

First Impression 1987

ಹಕ್ಕುಗಳು ಲೇಖಕರದ್ದು

ಮುದ್ರಣ: ಸುಲಭಾ ಮುದ್ರಣಾಲಯ
ಸೋಮೇಶ್ವರ ಉಚ್ಚಿಲ
ದ. ಕ. 574 156

॥ ಶ್ರೀ ಮಹಾ ಗಣಪತಯೇ ನಮಃ ॥

॥ ಗೋಪಾಲಕೃಷ್ಣಾಯ ನಮಃ ॥

ಶಾರ್ದೂಲ ವಿಕ್ರೀಡಿತ ವೃತ್ತ

ಶ್ರೀ ವಿಷ್ಣುಂ ವಿಜಯಾರ್ಚಿತಂ ವಿಧಿ ಪಿತಂ ವಿಶ್ವೇಶ್ವರಂ ಕೇಶವಂ ।
ದೇವೇಂದ್ರಾದಿ ಸಮಸ್ತ ದೇವ ನಮಿತಂ ನಾರಾಯಣಂ ಮಾಧವಂ ।
ಲಾವಣ್ಯಾಧಿಕ ಶೋಭಿತೋಜ್ವಲವಪುಂ ಗೋವರ್ಧನೋದ್ಧಾರಣಂ ।
ಗೋವಿಂದಂ ಗರುಡಧ್ವಜಂ ಮುರಹರಂ ಗೋಪಾಲಕೃಷ್ಣಂ ಭಜೇ ॥

ಭಾಮಿನಿ

ಗಜವದನ ಹೇರಂಬ ಗಣಪನ ।
ಭಜಿಸಿ ಪೂಜಿಸಿ ಭಾರತಿಗೆ ಮಣಿ ।
ದಜಭವರ ಕೊಂಡಾಡುತಂಬಿಕೆಯಂಘ್ರಿಗಭಿನಮಿಸಿ ।
ಭುಜಗಶಯನನ ದಿವ್ಯ ಪಾದಾಂ ।
ಬುಜವ ಸ್ಮರಿಸುತ ಗುಹನನರ್ಚಿಸಿ ।
ಸೃಜಿಸುವೆನು ಕೃತಿಯಿದನು ಮುನಿಪುರ ಹರಿಯು ಕರುಣದಲಿ ॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಸೂತ ಶೌನಕ ಮುಖ್ಯ ಮೌನೀ । ವ್ರಾತಕುತ್ತಮ ಶಿವ ಪುರಾಣವ ।
ಪ್ರೀತಿಯಿಂದುಸುರುತಿರೆ ನೈಮಿಷ । ಖ್ಯಾತ ವನದಿ ॥
ಒಂದು ದಿನ ವಿದಲೋತ್ಪಲರ ಶೈ । ಲೇಂದ್ರ ಸಂತೆ
ಕೊಂದೆಸೆದ ಚರಿತೆಯಂ ।
ನಿಂದೊರೆವೆನೆಂದರುಹತೊಡಗಿದ । ನಂದದಿಂದ ॥

ಭಾಮಿನಿ

ಕೇಳಿರೈ ಮುನಿವರರು ಸ್ವರ್ಗವ ।
ನಾಳುತಿರೆ ವಾಸವನು ವೈಭವ ।
ದೇಳಿಗೆಯೊಳವನೊಂದು ದಿನ ರಂಜಿಸುವ ಸಭೆಯೊಳಗೆ ।

ತಾಳಮದ್ದಳೆ ಗಾನ ಕೀರ್ತನ ।
ಮೇಳದಪ್ಸರೆಯರ ಸುನರ್ತನ ।
ಮೇಳವಿಸೆ ಸುರರುಲಿಯಲೋಲಗವಿತ್ತನುತ್ಸವದಿ ॥

ರಾಗ ನಾಟಿ ಝಂಪೆ ತಾಳ

ಉತ್ಸವದಲೋಲಗವ । ನಿತ್ತು ಪೇಳಿದ ಮಘವ ।
ನೆತ್ತಿ ಹರುಷದ ಮೊಗವ । ಮಿತ್ರರೊಡನೊಳವ ॥
ಸಪ್ತ ದಿಕ್ಪಾಲಕರೆ । ತೃಪ್ತಿಯಾಯ್ತೆನಗೆ ಖರೆ ।
ಪತ್ತನವನಡರುವರೆ । ದೈತ್ಯರೀಗಿಹರೆ ॥
ಹರಿಹರವಿರಿಂಚಿಯರ । ಕರುಣೆ ಸಂಪೂರ್ಣವಿರ ॥
ಅರಿಗಳಂಜಿಕೆಯೇರ । ಸುರರ ಬಾಯಾರ ॥
ಶತಯಾಗ ಗೈದು ಸುರ । ಪತಿಯೆಂಬ ಘನ ಪೆಸರ ।
ಪತಿಕರಿಸಿದೆನು ಸಾರ । ಅತಿ ಪುಣ್ಯಸಾರ ॥

ಕಂದ ಪದ್ಯ

ಬಪ್ಪವರಿಲ್ಲವು ನಿಮ್ಮಿದಿ ।
ರೊಪ್ಪವಿರೇ ನೀವಿದಕ್ಕೆಯುರುಹುವುದೆನಲುಂ ।
ಧೊಪ್ಪನೆಯೆದ್ದಗ್ನಿಯು ಮಷ ।
ದರ್ಪದೊಳೆಂದಂ ವಿಚಾರಶೀಲತೆಯಿಂದಂ ॥

ರಾಗ ಭೈರವಿ ಏಕತಾಳ

ಸುರಪನೆ ನೀಶತಯಾಗ । ಗೈ ।
ದಿರುವುದು ಪುಣ್ಯ ಸುಯೋಗ ।
ಸರಿಯುಂದು ಹರಿಹರ ಬ್ರಹ್ಮ । ಮೂ ।
ವರುಂ ಕಾವರು ಬಿಡದೆಮ್ಮ ॥

ದೈತ್ಯರದಾರೂ ಯಿತ್ತ । ದಂ ।
ಡೆತ್ತರು ಬಂದರು ವ್ಯರ್ಥ ।
ನಿತ್ತಾನಿದಿರೋಡಿಸುವೇ ವಿಜ ।
ಯೋತ್ಸವವನೆ ರೂಢಿಸುವೇ ॥

ಮರುತನೊರೆದನಹುದಹುದು । ಬಾ ।
ರರು ಬರೆ ಶೌರ್ಯವದಿಹುದು ।
ದುರುಳರ ಭಯಕೆಡೆಗೊಡರು । ಹರಿ ।
ಹರ ಬ್ರಹ್ಮರು ಕೈಬಿಡರು ॥

ಪ್ರಾಣ ಸ್ವರೂಪನು ನಾನು । ಎನೆ ।
ತ್ರಾಣದಿ ಬಿಡೆನೇನೇನು ।
ದಾನವ ಭಟರೆನಗೆಣೆಯೆ । ಇದಿ ।
ರಾನಲಿಕಿದೆ ಕೂರ್ಗಣೆಯೆ ॥

ರಾಗ ಭೈರವಿ ಅಷ್ಟ ತಾಳ

ವರುಣ ಯೋಚಿಸುತೆಂದನು । ನಮ್ಮಯ ಸ್ವರ್ಗ ।
ವರಣದಿ ಮಾತೊಂದನು । ಸುರಪಾಲನೆನಲದ ।
ಕರುಹಲು ಪ್ರತಿವಾದ । ಕಿರುವನೆ ಸುಭಟ ಯೋಧ ॥

ಬಪ್ಪವರಿಲ್ಲವಿತ್ತ । ಬಂದರು ಬಲ ।
ದರ್ಪವದಿಲ್ಲ ವ್ಯರ್ಥ । ಅಪ್ಪಳಿಸುತ ಯಮಂ ।
ಗೊಪ್ಪಿಪೆ ನಾ ಕ್ರಮಂ । ತಪ್ಪದ ಸಮರ ಭೀಮಂ ॥

ನಿರುತಿಯಾ ಕ್ಷಣದಿ ಪೇಳ್ದ । ಸಾಹಸಿಯು ನಾ ।
ನಿರುತಿರೆ ಪುರಕೆ ಬದ್ಧ । ನಿರತ ಸೇವಕನಾಗಿ ।
ಬರೆ ಖಳರಸು ನೀಗಿ । ತೆರಳುವರತ್ತ ಕೂಗಿ ॥

ಹರಿಹರ ಬ್ರಹ್ಮರಂತು ! ನಮ್ಮನು ನಿತ್ಯ ।
ಪೊರೆಯುವರಸುರರೆಂತು । ಬರುವರು ಬಾರರು ।
ಭರವಸೆಯೀವೆನು । ಧುರಕಂಜೆನೆಂದು ನಾನು ॥

ಭಾಮಿನಿ

ಇಂತವರು ಪೇಳಲ್ಕೆ ಸುಮನಸ ।
ಕಾಂತ ಭಲೆ ಮೆಚ್ಚಿದೆನು ನಿಮ್ಮ ವಂ ।
ಹಾಂತ ಬೆಂಬಲವೆನಗೆ ರಕ್ಷಾಕವಚವೆಂದೆನುತ ।
ಮಂಥನದ ವಿಷಯದಲಿ ವಿಜಯವ ।
ನಾಂತು ಸಭೆಯು ವಿಸರ್ಜಿಸುತ ವಿ ।
ಶ್ರಾಂತಿಗೈದಿದನೆಲ್ಲರುಂ ಬೀಳ್ಕೊಟ್ಟು ಸಂತಸದಿ ॥

Scanned by CamScanner

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಇತ್ತಲಿವರಿಂತಿರಲು ಸೌಖ್ಯದೊ ।
ಳತ್ತ ವಿದಲಾಸುರನು ಶೋಣಿತ ।
ಪತ್ತನದೊಳುತ್ಸವದೊಳೋಲಗ । ವಿತ್ತನಾಗ ॥

ಸಭೆಯೊಳೊಪ್ಪಿರಲನುಜನುತ್ಪಲ ।
ಸುಬಲ ಮಂತ್ರೀಶ್ವರ ದಳಾಧಿಪ ।
ಪ್ರಬಲ ಮುಖ್ಯರು ಖಳನು ತನ್ನಯ ವಿಭವ ನೋಡಿ ॥

ಆನಂಜ ಮುಖ್ಯರಿಗೆಂದ ನವಿಶ್ವಾ ।
ಘನ ತರದ ವೈಭವಕೆ ಲೋಕದೊ ।
ಳೆಣೆಯುದಿಲ್ಲವು ಕೀರ್ತಿಕಾಮಿನಿ । ಕುಣಿವಳಿಲ್ಲೀ ॥

ಆದರಾ ದಾಯಾದಿಗಳು ಸ್ವ
ರ್ಗಾಧಿಪತ್ಯದಿ ಮೆರೆಯುವರು ಮಘ ।
ವಾದಿಗಳು ಎನೆ ನಮಗೆ ಲಾಂಛನ । ವಾದುದೈಸೆ ॥

ಹಕ್ಕು ಹಿರಿಭಾಗಕ್ಕೆ ಯೋಚಿಸೆ ।
ದಕ್ಕಬೇಕದು ನಮಗೆ ನಮ್ಮಾಯು ।
ರಾಕ್ಷಸರು ಹೊಯ್ದಾಡಿ ಹಿಂದಕೆ । ಸಿಕ್ಕದಾಯ್ತು ॥

ಹೊಡೆದು ದಿವಿಜರನಟ್ಟಿ ನಾವೇ ।
ಪಡೆಯಬೇಕಿದಕೇನನೆಂಬಿರಿ ।
ತೊಡಗೆ ಕಾರ್ಯವನೆನಲಿಕುತ್ಪಲ । ನುಡಿದನೆದ್ದು ॥

ರಾಗ ಭೈರವಿ ಏಕತಾಳ

ಸರಿ ಸರಿ ಸರಿಯುಹಃದಣ್ಣಾ । ನೀ ।
ನೊರೆದುದು ಹುಲು ಮೈಗಣ್ಣ ।
ಸುರಪತಿಯೆನಲಪಮಾನ । ನಮ ।
ಗಿರದಿದಕೇನನುಮಾನ ॥

ಅಪ್ಪಣೆಯಾದರೆ ಕ್ಷಣದಿ । ಹೊಡೆ ।
ದಪ್ಪಳಿಸುತ್ತಲಿ ರಣದಿ ।
ದರ್ಪದಿ ವಿಜಯವ ಪಡೆದು । ತಂ ।
ದೊಪ್ಪಿಪೆ ಮಘವನ ಪಿಡಿದು ॥

ಮಂತ್ರಿ ಸುಬಲನುಸುರಿದನು । ನಾ ।
ಸಂತಸದಿಂದೊಪ್ಪಿದೆನು ।
ಪಂಥದಿ ಹೊಯ್ದಾಡುವೆನು । ನೆಲೆ ।
ನಿಂತವರನು ದೂಡುವೆನು ॥

ವೃಂದಾರಕರೆಮಗಿದಿರೆ । ಆ ।
ಚಂದ್ರಧರಗು ನಾ ಬೆದರೆ ।
ಸಂದೇಹವು ಯಾಕಿದಕೆ । ಜಯು ।
ತಂದೀವೆನು ತವ ಪದಕೆ ॥

ದಳಪತಿ ಪ್ರಬಲನು ನುಡಿದ । ಅಸ ।
ದಳವಲ್ಲೀಕ್ಷಣ ನಡೆದುಂದ ।
ಬಲರಿಪು ಮುಖ್ಯರ ಗೆಲುವ । ಮಾ ।
ರ್ಬಲ ನಮಗಿದೆ ಕೈಗೊಳುವ ॥
ಎಂದೋ ಗೈಯುವ ಕಾರ್ಯ । ಅವು ।
ರೇಂದ್ರನೆನಿಪ ಸೌಕರ್ಯ ।
ಹೊಂದಿದವನು ನೀನಿರುತ । ಆ ।
ಹಂದೆಗೆ ಸಲದನವರತ ॥

ಭಾಮಿನಿ

ಕೇಳುತ್ತೆಲ್ಲವ ವಿದಲ ಸಂತಸ ।
ತಾಳಿ ಮೆಚ್ಚಿದೆನೀಗ ಸುರಪುರ ।
ಧಾಳಿಗೈದಲು ಸಿದ್ಧತೆಯ ಗೈಯಲುವಡೆನುತ್ತೇಳೆ ।
ಕಾಳಗಕ್ಕೆದ್ದುದನು ತಿಳಿದು ವಿ ।
ಶಾಲಮತಿ ಗುರು ಶುಕ್ರ ಬಂದಾ ।
ಖೂಳ ದೈತ್ಯಾಧಿಪನ ತಡೆದಿಂತೆಂದನನುನಯದಿ ॥

ರಾಗ ಎರಕಲಕಾಂಬೋಧಿ ಅಷ್ಟತಾಳ

ಕೇಳಯ್ಯ ವಿದಲ ನಾ । ಪೇಳುವುದೆಲ್ಲ ।
ಕಾಳಗಕ್ಕೆದಲು । ವೇಳೆಯಿದಲ್ಲ ॥ ಪ ॥
ಸುರಪುರವನು ಗೆಲ್ಲ । ವರೆ ಪೊರಡುವ ಗುಲ್ಲು ।
ಥರವಲ್ಲ ವೀಗೆಲ್ಲು । ಧುರಕೆಂದು ಸಾಗಲು ।

ಸರಿಯಾದ ಸಮಯುವಲ್ಲ । ಎನ್ನಯಂ ಮನ ।
ಕರಿಯುದ ವಿಷಯುವಿಲ್ಲ । ನೀನೀಗನು ।
ಸರಿಸುಂವ ಕಾರ್ಯುವೆಲ್ಲ । ಬೇರಿದೆಯುದ ।
ನರುಹುವೆ ಶ್ರೇಯು । ಸ್ಕರವದು ಮಲ್ಲ ॥ ಕೇಳಯ್ಯ ॥

ಬರ್ದಿಲರನು ನೀನು । ಸ್ಪರ್ಧಿಸಿ ಗೆಲಲೇನು ।
ವರ್ಧಿಸೆ ನಿನ್ನನು । ಮರ್ದಿಸೆ ಬರುವನು ।
ರುದ್ರನು ಹರಿಯೊಡನೆ । ಬ್ರಹ್ಮನು ಸಹಿ ।
ತಿರ್ದು ರೋಷದೊಳೊಡನೆ । ಯೋನ್ಗ್ಲವುದು ।
ಹೋರ್ದರಾಕ್ಷಣ ಮೃಡನೆ । ಭಯುಂಕರ ।
ರುಂದ್ರನಕ್ಕವರಿಗೆ ಯುುದ್ಧವೇ । ನ್ಗಡಣೆ ॥ ಕೇಳಯ್ಯ ॥

ಅದಕಾಗಿ ತಪದಲಿ । ವಿಧಿಯಂ ಮೆಚ್ಚಿಸುತಲಿ ।
ಕದನ ವಿಕ್ರಮದಲಿ । ವಧೆ ಬರದೋಲ್ಬಳಿ ।
ಕದುಭುತ ಶಕ್ತನಾಗಿ । ಜಾಳಿವ ವರ ।
ವೊದಗಿಸು ಭಯುವ ನೀಗಿ । ಮತ್ತೆಲ್ಲರ ।
ಕೆದಕಿ ಶೌರ್ಯದಿ ಹೆಣಗಿ । ದಿಗ್ವಿಜಯಿಯಂ ।
ಪ್ಪುದಕೆಡರಿಲ್ಲ ಯಾ । ರಿದಿರಿಗು ಸಾಗಿ ॥ ಕೇಳಯ್ಯ ॥

ವಾರ್ಧಿಕ್ಯ

ಸೋದರರು ನೀವೀರ್ವರಾ ವಿಧಿಯ ಭಜಿಸಿ ಸಂ ।
ಪಾದಿಸಿರಿ ವರವನೆನಲಾ ದುರುಳರೊಪ್ಪುತ ಹ ।
ಸಾದವೆಂದೈದಿ ಮೇಲಾದ ಹಿಮಗಿರಿಯೆಡೆಗೆ ನಿಂತು ಪಾದಾಂಗುಟದಲಿ ।
ಸಾಧನೆಯು ತಪದೊಳಾರಾಧಿಸಲ್ವಿಧಿಯುನುರಿ ।
ಬಾಧೆಯಿಂ ತತ್ತರಿಸೆ ಮೇದಿನಿಯು ಸುರಪ ಸಂ ।
ಶೋಧಿಸುತಲದ ನಿಲಿಸೆ ಹಾದಿಯಂ ಹುಡುಕಿ ಮುಂದಾದನಾ
ಕಾರ್ಯಕಾಗ ॥

ಕಂದ ಪದ್ಯ

ಜಂಭ ವಿರೋಧಿಯು ಯೋಚಿಸಿ ।
ಸಂಭ್ರಮದಿಂ ರಂಭೆಯಂೂರ್ವಶಿಯಾರ ಕರೆಯಲ್ ।
ಕುಂಭ ಕುಚಗಳ ಕುಲುಕಂತ ।
ಜಂಭದೊಳೈತಂದು ಕಾರ್ಯವೇನೆನಲೊರೆದಂ ॥

ರಾಗ ಕಾಂಬೋಧಿ ಅಷ್ಟತಾಳ

ರಂಭೆಯೂರ್ವಶಿಯರು ಕೇಳಿ । ನಿಮ್ಮೊ ।
ಳಿಂಬೆ ಲಾಲಿಸಿ ಕಾರ್ಯಕೇಳಿ । ಕಾಂಬರ ಮನ ಕ್ಷಣ ।
ತುಂಬುಂವ ಲಕ್ಷಣ । ಬಿಂಬಿತದಾನನ ।
ಸಂಭ್ರಮಕೊಲಿದೆ ನಾ ॥

ವಿದಲೋತ್ಪಲರು ದುಷ್ಟ ಖಳರಂ । ಈರ್ವ ।
ರದುಭುಂತ ರೂಪದಗ್ಗಳರಂ । ವಿಧಿಯು ತಪದೊಳೊಲಿ ।
ಪುದಕಿಚ್ಚಿಸುತ್ತಲಿ । ಕುದಿಸಿದರಂರಿಯಲಿ ।
ಬೆದರಿಕೆ ನಮಂಗಿಲ್ಲಿ ॥

ದೃಢ ಚಿತ್ತದಿಂ ಹಿಮಗಿರಿಯು । ಮೇ ।
ಲ್ಗಡೆಗೈವರವರಿಷ್ಟ ಗಂರಿಯು । ಕೆಡಿಸಿ ನರ್ತನ ಮಾಡಿ ।
ರೊಡನೆ ಗಾನವ ಹಾಡಿ । ಕುಡಿನೋಟ ಶರ ಹೂಡಿ ।
ತಡವರಿಸದೆ ಕಾಡಿ ॥

ರಾಗ ಸುತುಟಿ ಏಕತಾಳ

ರಂಭೆಯೊರೆದಳದಕೆ । ನಾ ಪ್ರಾ ।
ರಂಭೆಯ ಪೇಳಿದಕೆ । ಕಾಂಬೆನು ಹುಲು ಖಳ ।
ಹುಂಬರ ದೃಢ ಛಲ । ಶಂಬರಶರವೆಳ ।
ಕೊಂಬುದು ಮನವೊಳ ॥

ಹಾಡನೊಂದ ಹಾಡಿ । ನರ್ತನ ।
ಮಾಡಿ ಮೋಹ ಹೂಡಿ । ಮೂಡಿಸಿ ಭ್ರಮೆಂ ಕರ ।
ಜೋಡಿಸಿ ಬಹ ತೆರ । ರ್ಝಾಡಿಸಿ ಧೂರ್ತರ ।
ದೂಡುವೆ ನಾ ಹೊರ ॥

ರಾಗ ಕೇದಾರಗೌಳ ಅಷ್ಟತಾಳ

ಉಸುರಿದಳಾಗೂ । ರ್ವಶಿ ನಾ ಹೇಗೂ ।
ಅಸುರರ ಮನ ಕೆಡಿಸಿ । ಉಸುರು ಬಲಿದ ಬಿಗು ।
ಕುಸಿದು ಮೊಗದಿ ನಗಂ । ಪಸರಿಪೆ ವಶಪಡಿಸಿ ॥

ಮರುಳುಗೊಳಿಸಿ ಮನ । ಕೆರಳಿಸಿ ಕಾಮನ ।
ಶರ ಕಳುಹಿಸಿ ಗೆಲುವೆ । ಅರಿಯೆಯ ಹಿಂದಿನ ।
ಚರಿತೆಯಾನಿಂದೆನ । ಗಿರುವದದೇ ಫಲವು ॥

ನುಡಿ ದೃಢ ಮಾತಿನ । ಸಡಗರವಲ್ಲೆನ ।
ಲೊಡನಾ ಸುರನಾಥ । ಕೊಡಲಪ್ಪಣೆ ಕ್ಷಣ ।
ಕೊಡನೀರ್ವರು ವನ । ದೆಡೆಗೈದಿದರತ್ತ ॥

ಕಂದ ಪದ್ಯ

ನಿಂದು ಹಿಮಾಚಲದೊಳು ದೈ ।
ತ್ಯೇಂದ್ರರನೀಕ್ಷಿಸಿ ಕರಾಳ ಖಳರಿದಿರಿನೊಳುಂ ।
ಚಂದದಿ ಪಾಡುತಲಾ ಸಂಮ ।
ಗಂಧಿನಿಯರು ಕುಣಿದರುತ್ಸಾಹಾನಂದದೊಳುಂ ॥

ರಾಗ ಬೇಗಡೆ ಆದಿತಾಳ

ಕುಣಿದರು ಕುಣಿದರು । ಕುಣಿದರೀರುವರು ।
ಕುಣಿದರು ಕಾಲ್ಗೆಜ್ಜೆ । ಕಿಣಿಲೆನಲವರು ॥ ಪ ॥
ಸೋಗೆ ಮೈಮರೆಯೆ ಕಂ । ಡಾಗ ನರ್ತನವ ।
ಬಾಗಿ ಮಾರುತ ಕೊಂಡು । ಸಾಗೆ ಕೀರ್ತನವ । ಕುಣಿದರಂ ॥

ನಾಗನರ್ತನ ನೋಡಿ । ತೂಗಲು ಶಿರವ ।
ಕೋಗಿಲೆ ಗಾನ । ಕ್ಕೇಗೆ ಮತ್ಸರವ । ಕುಣಿದರು ॥

ಭಾಮಿನಿ

ದುಷ್ಟ ಮೃಗ ಪಕ್ಷಿಗಳು ಸಹಿತ ವಿ ।
ಶಿಷ್ಟ ನರ್ತನ ಗಾನಮಂ ಮನ ।
ದಿಷ್ಟದಿಂ ಮೆಚ್ಚಿದುವು ಖಳರೆಳ್ಳನಿತು ಕದಲದಿರೆ ।
ನಿಷ್ಠೆಗಚ್ಚರಿಯಿಂದಲಬಲೆಯರು ।
ರಿಷ್ಟ ಪ್ರಬಲರೆ ತಪದೊಳೀ ಹುಲು ।
ಭ್ರಷ್ಟರಿದರಂ ನುಡಿಸಬೇಕೆಂದೆಣಿಸುತಂಸರಿದರು ॥

ರಾಗ ಕೇದಾರಗೌಳ ಝಂಪೆತಾಳ

ಏಳಿರೇಳಿರಿ ನೋಡಿರಿ । ಯಾರೆಂದು ।
ಕೇಳಿರೇ ಮನ ನೀಡಿರಿ । ಬಾಲೆಯರನೊಡಗೂಡಿರಿ ।
ಬಂದ ಪೂ । ಗೋಲನುರಿ ನೀಗಾಡಿರಿ ॥

ಎಂಥ ಚೆಲುವಿನ ರೂಪವು । ನಿಮ್ಮದು ಮ ।
ಹಾಂತವಿನಿತಪರೂಪವು । ಅಂತೆ ಬಿಡ ಸ್ಮರರೋಪವು ।
ನಮ್ಮ ಮೋ । ಲೆಂತದಿಲ್ಲಾರೋಪವು ॥

ರಂಭೆಯೂರ್ವಶಿಯರೆನಲು । ರೂಪ ಸೌ ।
ರಂಭೆಯರು ಪ್ರೇಮ ಹೊನಲಂ । ತುಂಬಿ ಹರಿವುದ ಕಾಣಲಂ ।
ಬನ್ನಿ ಮೃದಂ । ಚುಂಬನದಿ ಮನಕಾನಲಂ ॥

ಇಂತವರು ಹಲ ವಿಧದಲಿ । ನುಡಿಸಿ ದಣಿ ।
ವಾಂತು ನಾಚಂತ ಮಂನದಲಿ । ಪಂಥ ಬಿಡಂತತ್ತ ಗಮಿಸಿ ।
ಪೇಳ್ದರು ಜ । ಯಂತಪಿತಗೆಲ್ಲ ನಮಿಸಿ ॥

ಕಂದ ಪದ್ಯ

ನುಡಿಯಂ ಕೇಳ್ದಾ ಸುರಪಂ ।
ಕುಡುಮಿಲ್ಲನ ಕಳುಹಿ ನೋಳ್ಪೆನೆನುತಲೆ ಕರೆಸುತ ।
ನಡೆದುದನರುಹುತ್ತಲಿ ನೀ ।
ಕೆಡಿಸಾ ತಪವೆನಲಂ ಪೇಳ್ದ ಕಾಮಂ ಕನಲಿ ॥

ರಾಗ ಮಾರವಿ ಏಕತಾಳ

ಬಿಡು ಬಿಡಂ ಮಘವನೆ । ದಡಿಗರ ಬಗೆವನೆ ।
ಕಡುಹರಿಯೆಯ ನೀನಂ । ಕೆಡಹುವೆ ಜಗವನೆ ।
ಮೃಡನೇ ಮಿಗುವನೆ । ತೊಡೆ ನಾ ಬಾಣವನು ॥

ಹರಿ ಹರ ಬ್ರಹ್ಮರ । ಮರುಳುಗೊಳಿಸಿ ಹೊರ ।
ಹೊರಡಿಸಿ ಸ್ತ್ರೀಯರೆಡೆ । ಸರಿಸಿದ ಸ್ಮರಶರ ।
ದುರುಳರ ಮನಸ್ಥಿರ । ಮರೆಸುಗುಂ ಗೆಲದೆ ಬಿಡೆ ॥

ಮಾರನಿಗಿದು ನಿ । ಸ್ಸಾರವು । ಭಯಮ ನಿ ।
ವಾರಿಪೆನೊಡನೀಗ । ಸಾರುತ ಜಯಧ್ವನಿ ।
ಯೇರಿಸಿ ನಾ ದಣಿ । ವಾರಿಸಿ ಬಹೆ ಬೇಗ ॥

ಭಾಮಿನಿ

ಕಾಮನಿಂತರುಹುತಲಿ ಸುರಪನ ।
ನೇಮಮಂ । ಪಡೆದೊಡನೆ ಗಮಿಸು ।
ತ್ತಾ ಮಹಾ ಹಿಮಗಿರಿಗೆ ಕಂಡನು ಖಳರ ತಪದಿರವ ।

Scanned by CamScanner

ತಾಮಸೀಚರರುಗ್ರ ತಪದುರಿ ।
ಭೂಮಿಯಂ ಪಸರಿಸುತ ಸಂತ್ರಲು ।
ವ್ಯೋಮವಡರಿತೆಯುರರೆಯೆನುತಾಕ್ಷಣದಿ ಖತಿಗೊಂಡ ॥

ರಾಗ ಭೈರವಿ ಏಕತಾಳ

ಕಾಮನು ಖತಿಗೊಂಡಿಂಥ । ಹುಲು ।
ಕಾಮುಕರಿಗೆ ಬಂದಂಥ ॥ ಸಾಮರ್ಥ್ಯವು ನನಗಿದಿರೆ । ಈ ।
ತಾಮಸ ತಪ ಕೆಡಿಸದಿರೆ ॥

ಎಂದರವಿಂದಾಸ್ತ್ರವನು । ಬಿಡೆ ।
ಸಂಧಿಸಿ ಧನುವಿಂಗವನು । ಹಂದದಿರಲು ಖಳರಾಗ ।
ಮ । ತ್ತೊಂದು ಶರವ ತೊಡೆ ಬೇಗ ॥

ಆ ಶರವದು ನಿಲದುಡುಗೆ । ಉಳಿ ।
ದಾಶುಗಗಳು ಸೋತಡಗೆ । ಬೇಸರದಿಂದ್ಯೈದಿದನು ।
ಸ್ಮರ । ವಾಸವನಿಂಗರುಹಿದನು ॥

ಕಂದ ಪದ್ಯ

ಸ್ಮರನಿಂತ್ಯೈದುತ ಸಂರಷಂ ।
ಗರುಹಲ್ಕನಿತರೊಳಂ ಬ್ರಹ್ಮನೆಲ್ಲವನರಿತುಂ ।
ನಿರುಪಾಯದಿ ಮೈದೋರ್ದಾ ।
ದುರುಳರನೆಚ್ಚರಿಸುತೆಂದ ಮೆಚ್ಚಿದೆನೆನುತಂ ॥

ರಾಗ ನವರೋಜು ಏಕತಾಳ

ಮೆಚ್ಚಿದೆ ಮೆಚ್ಚಿದೆ ಖಳರೆ । ನಿಮ್ಮ ।
ನಿಶ್ಚಲ ಭಕ್ತಿಗೆ ಭಳಿರೆ । ಅಚ್ಚರಿಯಾದುದುಂ ।
ಹೆಚ್ಚಿನ ತಪವಿದು । ಬೆಚ್ಚಿತು ಜಗವದು ।
ಯಿಚ್ಛೆಯುದಾವುದು ॥

ನುಡಿದರೆ ನಿಮ್ಮಭಿಮತವ ।
ನಾ । ಕೊಡುವೆನಿದೋ ಸಮ್ಮತವ ।
ದೃಢವಿದು ಮಾತನು । ಬಿಡನಃ ವಿಧಾತನು ।
ನಡೆಸುವ ಧಾತನು । ಪಡೆಯಿರಿ ಮನದನು ॥

ರಾಗ ಬೇಗಡೆ ಝಂಪೆತಾಳ

ಎನಲು ಜಯ ಜಯವೆಂದು । ಮಣಿದವರು ಬಲವಂದು ।
ವಿನಯದಿಂದಲಿ ನಿಂದು । ನೆನೆದೊರೆದರೊಂದುಂ ॥

ಸರಸಿಜೋದ್ಭವ ಕೇಳು । ಪುರುಷರಾರಿಂದಲು ।
ಮರಣವೇ ಬರದವೊಲು । ವರವ ಕೊಡುಯೆನಲುಂ ॥

ಅಸ್ತೆನುತ ಹರಸಿ ವಿಧಿ । ಯತ್ತ ಗಮಿಸಲ್ಕವದಿ ।
ಧೂರ್ತರುಂಬ್ಬುತ ಮನದಿ ! ಪತ್ತನಕ್ಕೈದಿ ॥

ಭಾಮಿನಿ

ಗುರುವಿಗೆಲ್ಲವನರುಹಿ ಸೈನ್ಯವ ।
ನೆರಹಲಾಜ್ಞೆಯಂ ಪಡೆದು ಮಂತ್ರೀ ।
ಶ್ವರ ದಳಾಧಿಪ ಮುಖ್ಯರಂ ಬರಿಸುತಲಿ ಸಜ್ಜಾಗಿ ॥
ದುರುಳ ಸೋದರರೀರ್ವರುಂ ಭೀ ।
ಕರ ಬಲೌಘವ ಕೂಡುತಾಕ್ಷಣ ।
ಪೊರಟು ಸಾರ್ದಮರಾವತಿಯ ಮುತ್ತಿದರು ದಂಡುಕಿನಲಿ ॥

ಕಂದ ಪದ್ಯ

ಮುತ್ತಲ್ಪುರವಂ ದೈತ್ಯರ್ ।
ಭೃತ್ಯರು ತಿಳಿಪುದ ವಿಚಾರಿಸುತ್ತರಿವಿವರಂ ।
ಪುತ್ತವರೊಳಗೋರ್ವಂ ಸಾ ।
ರ್ದತ್ತೊಲಗಕಂ ಬಿಡೌಜಗೆರಗುತ್ತೆಂದಂ ॥

ರಾಗ ಮುಖಾರಿ ಏಕತಾಳ

ಲಾಲಿಸಬೇಕು ಬಿನ್ನಪವ ಎಮ್ಮೊಡೆಯ । ಬಿಡೆ ನಿಮ್ಮಡಿಯಾ ।
ಲಾಲಿಸಬೇಕು ಬಿನ್ನಪವ ಎಮ್ಮೊಡೆಯ । ಲಾಲಿಸಬೇಕು ದ ।
ಯಾಳುವೆ ತದಕದ । ದಾಳಿಯು ತವಕದ ।
ಲೇ ಲಕ್ಷಿಪುದಿದ ॥ ಲಾ ॥

ಶೋಣಿತ ಪುರದ ಮದಾಂಧ ರಕ್ಕಸರು । ವಿದ್ಯುಲ್ಲೋತ್ಪಲರು ।
ದಾನವಾಧಿಪರು ಕರ್ಕಶರು । ಸೇನೆ ಸಹಿತ ಪುರ ।
ಹಾನಿಯ ಮಾಳ್ಪರ । ದೇನಾಡಂಬರ ।
ಕಾಣೆಸುವರು ಹೊರ ॥ ಲಾ ॥

Scanned by CamScanner

ಸುರಪತಿಯೆಲ್ಲಿಹನವನೈತರಲಿ । ಪುರವನಂ ತೆರಲಿ ।
ಹೊರೆಕಾಣಿಕೆಯನೆಲ್ಲ ಮರೆಯದೆ ತರಲಿ । ಪರಿಕಿಸಬೇಕೆನಂ ।
ತಿರುವರು ಠೀಕನು । ಮೆರೆಸಲು ಸಾಕನು ।
ವರದಲಿ ದುಡುಕನು ॥ ಲಾಲಿಸ ಬೇಕು ॥

ಭಾಮಿನಿ

ದೂತನೆಂದುದ ಕೇಳುತಾ ಪುರು ।
ಹೂತನಭಯವನಿತ್ತು ಕಳುಹಂ ।
ತ್ರಾತನನಂ ಖತಿಯಾಂತು ದಿಕ್ಪಾಲಕರನೊಡಗೊಂಡು ।
ಭೂತಳವೆ ನಡುಗಲ್ಕೆ ಸೇನಾ ।
ವ್ರಾತಮಂ ಕೂಡುತ್ತ ಖಳರ ನಿ ।
ಪಾತಕೈದಲ್ಸುಬಲನಿದಿರಿಸಲೆಂದ ಶಿಖಿ ತಡೆದಂ ॥

ರಾಗ ಭೈರವಿ ಏಕತಾಳ

ನೀನಾರೆಲ ಖಳ ಧೂರ್ತ । ಈ ।
ಸೇನೆ ಸಹಿತ ಬಂದಿತ್ತ । ಹಾನಿಗೆ ನಿಂತೆಯ ಮರುಳೆ ।
ನಿಲೆ । ಪ್ರಾಣದಿ ಹಿಂದಕೆ ಮರಳೆ ॥

ಶೋಣಿತ ಪುರಪತಿ ವಿದಲ । ಅವ ।
ಗಾನಂ ಪ್ರಧಾನಿಯು ಸುಬಲ । ತ್ರಾಣದೊಳೀ ಪುರ ಪಡೆವೆ ।
ಸುರ । ಶ್ರೇಣಿಯಂ ಧುರದಲಿ ಪೊಡೆವೆ ॥

ಹತ್ತಿತೆ ಮಂದವದನಿಳುಹಿ । ಖಳ ।
ಮೊತ್ತವ ಯಮನೆಡೆ ಕಳುಹಿ । ದೈತ್ಯನೆ ಪ್ರಾಯಶ್ಚಿತ್ತ ।
ನಿಮಂ । ಗಿತ್ತಪೆ ನಾ ದೃಢಚಿತ್ತ ।

ನೋಡುವೆ ಸಹಸವನೆಂದು । ಖಳ ।
ನಾಡುತ ಬಾಣವನೊಂದು । ಹೂಡಲಿಕಾಕ್ಷಣವದನು ।
ಪುಡಿ । ಮಾಡುತ ಶಿಖಿ ಕೆಡಹಿದನು ॥

ಕಂದಪದ್ಯ

ದುಶ್ಚರಿತಂ ಹಲವಸ್ತ್ರಗ ।
ಳೆಚ್ಚರು ಫಲಿಸಡೆ ಬಳಲ್ದು ಸೋತೋಡಲ್ಕಂ ॥
ಅಚ್ಚರಿಯಿಂ ಪ್ರಬಲಂ ಕಣ್ ।
ಕಿಚ್ಚಂ ಸೂಸತಲಗ್ನಿಯಂ ತಡೆದೆಂದಂ ॥

ರಾಗ ಭೈರವಿ ಅಷ್ಟತಾಳ

ಭಳಿರೆ ಸಾಹಸಿಯೆ ನೀನು । ಯಾರುಸಂರ್ಯೈ ।
ಗೆಲಿದೆಯ ಮಂತ್ರಿಯನಂ ॥ ದಳಪತಿ ಪ್ರಬಲ ನಾ ।
ನಳುಕೆ ನೋಡೀಕ್ಷಣ । ಸುಲಭದೊಳಿರಿವೆ ನಿನ್ನ ॥

ಇರಿಯಲಸಾಧ್ಯವೆನ್ನ । ಅಗ್ನಿಯಂಮ ನೀ ।
ನರಿಯೆಯ ರಣದಿ ನಿನ್ನ । ಉರಿಸಿ ಭಸ್ಮವ ಮಾಡ ।
ದಿರೆನು ಸುಮ್ಮನೆ ಮೂಢ । ಗರುವದ ಮಾತು ಬೇಡ ॥

ಅಷ್ಟೊಂದು ದುಡುಕದಿರು । ಸಾಗದು ನಿನ್ನ ।
ದಿಟ್ಟತೆಯೆನ್ನಿದಿರು । ದೃಷ್ಟಿಸುತಿರುಯೆಂದು ।
ದುಷ್ಟನು ಕಣೆಯೊಂದು । ಬಿಟ್ಟನಬ್ಬರಿಸಿ ನಿಂದು ॥

ಅನಲನು ಕಡಿದಿಡಲು । ಬಾಣಾವಳಿ ।
ಯನೆ ಪ್ರಬಲನು ಹೂಡಲು । ಕ್ಷಣ ಶಿಖಿ ಬಳಲಿದ ।
ಅನಿಲನಿದಿರು ನಿಲು । ತಿನಿತೆಂದ ದೈತ್ಯನೊಳು ॥

ರಾಗ ಮಾರವಿ ಏಕತಾಳ

ಅನಲ ಬಳಲೆ ನಾ । ನನಿಲನಿರುವೆನೆನ ।
ಗನುವರಕಿದಿರಿಲ್ಲ । ಇನಿತಿಹ ವರ್ತನ ।
ಕಿನಜನ ಪತ್ತನ । ನಿನಗೊದಗಿಪೆ ಖುಲ್ಲ ॥

ವಾಯುವೆ ನೀನಸ । ಹಾಯಕನಾನೆಸ ।
ವಾಯುಧ ಶರದಿದಿರು । ಜಾಯಿಯ ಪೌರುಷ ।
ಬೇಯುದು ಹೋರೆ ಸ । ಹಾಯಕ್ಕಾರೊದರು ॥

ಸಂಧೆಯೀಂಟಿದ ತನು । ವಿದ ಸದೆವಾತನಂ ।
ವಿಧಿ ಸೃಷ್ಟಿಯೊಳಿಲ್ಲ । ಇದಿರಿಸಿದಾತನಂ ।
ಬದುಕುವನೇ ನಾ । ಕದನದ ಕಲಿ ಮಲ್ಲ ॥

ಪರಿಕಿಪೆ ನಿಲ್ಲೆನು । ತರುಹಂತ ಖುಲ್ಲನು ।
ಗರುವದಿ ತೆಗೆದಾಗ । ಶರ ಬಿಡಲನಿಲನು ।
ಬರುವಾ ಸರಳನು । ತರಿದೊಟ್ಟಿದ ಬೇಗ ॥

Scanned by CamScanner

ಭಾಮಿನಿ

ಬಳಿಕ ಪ್ರಬಲಾಸುರನು ಪಂಥದಿ ।
ಬಲಂ ತರದಿ ಹೋರಾಡಿ ಫಲಿಸದೆ ।
ಬಳಲಿ ಭಯದಿಂದೋಡೆ ಕಂಡದನುತ್ಪಲಾಂಕ ಖಳ ॥

ಬಲುಮೆಯಿಂ ಖತಿ ಮಸಗಿ ಬರುತಿರೆ ।
ಬಳಿಯೊಳಿಹ ಕಲಿ ವರುಣ ಕನಲುತ ।
ಬಲಿತ ಶೌರ್ಯಾಟೋಪದಿಂದಿದಿರಾಗುತಿಂತೆಂದ ॥

ರಾಗ ಭೈರವಿ ಝಂಪೆತಾಳ

ಭಳಿರೆ ಖಳ ನೀನಾರು । ನೆಲೆನಿಂತ ನಿನ್ನೂರು ।
ತಿಳಿಸಿ ಹಿಂದಕೆ ಸಾರು । ನಿಳಯವನೆ ಸೇರು ॥

ಶೋಣಿತಾಪುರದನುಜ । ಶ್ರೇಣಿಯಧಿಪತಿಯನುಜ ।
ನಾನುತ್ಪಲಾಂಕ ನಿಜ । ತ್ರಾಣಿ ನಿನಗಿನಜ ॥

ವರುಣ ನಾನರಿತು ನುಡಿ । ಬರಿದೆ ಗರ್ವವನಾಡಿ ।
ದರೆ ಫಲಿಸದೀ ನಾಡಿ । ಗೆರಗು ಕರ ನೀಡಿ ॥

ಕರವೀವೆ ಶರ ಮುಖದಿ । ಒರೆದೆನ್ನ ಸಮ್ಮುಖದಿ ।
ಗರುವವನು ನೀ ಸುಖದಿ । ತೆರಳೆ ಬಿಡೆ ಕಾದಿ ॥

ಎಂದು ಗರ್ಜಿಸುತ ದೊಣೆ । ಯಿಂದಸುರ ತೆಗೆದು ಕಣೆ ।
ಯೊಂದೆಸೆಯೆ ವರುಣ ಕೊನೆ । ತಂದನದಕೊಡನೆ ।

ಕಂದಪದ್ಯ

ದುರುಳನೊಳೀತೆರ ಕಾದುತ ।
ವರುಣಂ ಬಳಿಕರಿತು ದೈತ್ಯ ವರಬಲನೆನುತಂ ।
ಮರಳಲ್ಕಂಡದ ನಿರುತಿಯಂ ।
ಧುರಕಿದಿರಾಗುತ ಮದಾಂಧನೊಡನಿಂತೆಂದಂ ॥

ರಾಗ ಘಂಟಾರವ ಏಕತಾಳ

ದುರುಳ ರಕ್ಕಸ ಯುದ್ಧದೊಳೆಮ್ಮಯ । ವರುಣನಂ ಗೆಲಿ ।
ದಿರುವಿಯಾಗಲಿ । ಧುರಕೆ ನಾನಿಹೆ ಕಡುಗಲಿ ॥

ಕಲಿಗಳೆಷ್ಟೋ ಮಂದಿಗಳೀ ತೆರ । ಗಳಹಿ ।
ಮಡಿದರು । ಬಲುಮೆ ಸಲದುರು । ಬಲನು ನಾನಿದ ತಿಳಿದಿರು ॥

ತಿಳಿವೆನೆಲ್ಲವನಾದರೆ ಯೆಮ್ಮೊಳು । ಫಲಿಸದಮರರು ।
ಬಲದೊಳಮರರು । ಗೆಲುವಿನಿಂದಲೆ ಮೆರೆವರು ॥

ಅಮರರೆನ್ನುವ ಗರ್ವವೆ ನಿಲ್ಲೆಂದು । ಕುಮಂತಿ ಶರ ಬಿಡೆ ।
ದಮುನಕಾಕಡೆ । ಕ್ರಮದಿ ನಿರುತಿಯು ತರಿದಿಡೆ ।

ಭಾಮಿನಿ

ಚಿತ್ತವಿಸಿ ಮುನಿವರರು ಬಳಿಕಾ ।
ದೈತ್ಯನೊಳು ಹೊಯ್ದಾಡಿ ನಿರುತಿಯು ।
ಸತ್ವಕುಂದುತ ತೊಲಗೆ ಕಂಡದನೊಡನೆ ಖಾತಿಯಲಿ ॥
ವೃತ್ರಹರ ವಜ್ರಾಯುಧವ ತಿರು ।
ಹಂತ್ತ ಬರೆ ವಿದಲಾಸುರನು ಮುಂ ।
ದೊತ್ತಿ ತಾನೇ ತಡೆದು ಗರ್ಜಿಸುತೆಂದ ಸುರಪತಿಗೆ ॥

ರಾಗ ತುಜಾವಂತು ಮಟ್ಟೆತಾಳ

ನಿಲ್ಲೆಲಾ ಗಜೇಂದ್ರ ವಾಹನ ॥ ಪ ॥

ನಿಲ್ಲೆಲಾ ಸುರೇಶ ರೋಷ । ದಲ್ಲಿ ಪೋಪುದೆತ್ತ ವಿರಸ ।
ಸಲ್ಲ ಶೋಣಿತಾ ಪುರೇಶ । ಸೊಲ್ಲುತಿಹುದ ಕೇಳು ಹರುಷ ।
ಗೊಳ್ಳುತಿತ್ತು ಪುರವ ಬಾಗುತ । ಗೌರವಿಸುತ ।
ಲೆಲ್ಲ ಕಾಣಿಕೆಯನು ಬೇಗ ತ । ಕೆಡದಿರಿಂಥ ।
ಮುಲ್ಲತನದ ಮದದಿ ಬೀಗುತ ॥

ಮುಚ್ಚುಬಾಯ ಬರಿದೆಯಿಂಥ । ಹುಚ್ಚುತನದ ಚಲುವೆಯಾಂತ ।
ತುಚ್ಛ ನಿನಗೆ ಬೇಡ ಪಂಥ । ಸ್ವಚ್ಛತೆಯುಳಿ ಪಾಲಿಪಂಥ ।
ಉಚ್ಚ ಸ್ಥಾನ ಪಡೆವ ಯೋಚನೆ । ಬಂತೇಕೆ ನಿನ್ನ ।
ಕೆಚ್ಚಿಗುಚಿ ಫಲಿಸಯಾಚನೆ । ಸುಮ್ಮನಿಲ್ಲಿ ।
ಬಚ್ಚದೈದು ಗೃಹಕೆ ನೀಚನೆ ॥ ಸಾರೆಲಾ ಮದಾಂಧ ದಾನವ ॥

ಸಾಗೆ ಬರಿದೆ ನಾವು ಹಿರಿಯು । ಭಾಗದವರು ಪುರದ ಹೊರೆಯು ।
ನೀಗಲೆಂತು ಭಾಗ್ಯ ಸಿರಿಯಂ । ಭೋಗಕರ್ಹರಿರಲು ಕಿರಿಯಂ ।
ನಾಗಿ ನೀನು ಪೊರೆಯೆ ಪತ್ತನ । ತಪ್ಪಹುದು ನ್ಯಾಯ ।

Scanned by CamScanner

ತೂಗಿ ನೋಡು ಗೈದ ವರ್ತನ । ಈ ದೋಷ ಸರಿಸೆ ।
ಬೇಗ ಮಾಡು ದೈವ ಕೀರ್ತನ ॥ ನಿಲ್ಲೆಲಾ ।

ಯಾಗ ಶತವ ಗೈದ ಪುಣ್ಯ । ಯೋಗದಿಂದಲಿಂಥ ಗಣ್ಯ ।
ಭೋಗ ಪಡೆದನಲ್ಲದನ್ಯ । ಥಾ ಘನತ್ವವಲ್ಲ ಧನ್ಯ ।
ನಾಗಿ ಮೆರೆವೆನಿದನು ಕೇಳಲಂ । ಸಿಗದಂ ಇನ್ನು ನೀನಂ ಯುದ್ಧಕೇಳಲಂ ।
ಜೈಸಿ ಹಿಂದೆ । ಸಾಗೆ ನಿನ್ನ ದೇಶಕಾಳಲು ॥
ಸಾಗೆಲಾ ಮದಾಂಧ ದಾನವ ॥

ರಾಗ ಭೈರವಿ ಏಕತಾಳ

ಸಾಕೊದರರದಿರೆಲೊ ಮಘವ । ಬಿಡೆ ।
ರೀಕಿಂದೆತ್ತಲುಃ ಮೊಗವ । ನಾಕವ ಪಡೆದಾಳಂಪೆನು ।
ಹೊರ । ನೂಕುವೆ ಸುರ ಬಳಗವನುಂ ॥

ಇಂತಾಡುತ ಹಲವಾರು । ನಿನ ।
ಗಿಂತಲು ಮಿಗಿಲಾದವರು । ಹಂತಕ ಖಳರೆನ್ನಿದಿರು ।
ಮುಡಿ । ದಂತಕನೆಡೆಗೈದಿದರು ॥

ಅಂಥವರಂತಲ್ಲಾನು । ಬಲ ।
ವಂತನು ಭಯವಿಲ್ಲೇನು । ಆಂತೆನು ವಿಧಿಯಿಂ ವರವ ।
ಗೆಲು । ವಂತೆಲ್ಲರ ಸಂಗರವ ॥

ವಿಧಿಹರಿಹರರೇ ಪೊರೆವ । ಕ್ರಮಂ ।
ವಿಧಿಯಿಂ ಕೊಟ್ಟರುಂ ಪುರಷ । ಇದಕೆಡರೀಯಲು ಬಿಡರುಂ ।
ನಿ । ನ್ನಧಟತನಕೊಕ್ಕುಡಬಡರುಂ ॥

ಹರಿಹರಬ್ರಹ್ಮರೆ ಬರಲಿ । ನಾ ।
ನೊರೆವೆನು ನಿಂತನಿಬರಲಿ । ತೆರದಿರೆ ಪುರ ಸೆಣಸುವೆನು ।
ಇದಿ । ರಿರದೋಲತಿ ದಣಿಸುವೆನು ॥

ಇದು ನಿನಗಂತ್ಯದ ಬುದ್ಧಿ । ವೈ ।
ರದ ಬಲೆಯೊಳಂ ನೀ ಬಿದ್ದಿ । ವಧಿಸುವೆನೀಕ್ಷಣ ನೋಡು ।
ಸಹ । ಸದಿ ಶರಕೆದೆಯನು ನೀಡು ॥

ಎನೆ ವಿದಲನು ಶರ ಬಿಡಲು । ಆ ।
ಕಣೆಯ ಮಘವ ಕಡಿದಿಡಲು । ಕನಲಿ ಸುರಿಸೆ ಖಗವರುಷ ।
ಖಳ । ಹಣಿಸಿದನದ ಸುರರರಸ ॥

ವಾರ್ಧಿಕ್ಯ

ಋಷಿಗಳಾಲಿಸಿರಿ ಬಳಿಕಸುರನೊಳು ಹೋರಾಡಿ ।
ಬಸವಳಿದು ಗೆಲಲಿಕಿನ್ನಸದಳವೆನುತ್ತರಿತು ।
ವ್ಯಸನದಿಂ ಸುರಪಾಲ ನುಸುಳುತಲ್ಲಿಂದ ಹೊರದೆಸೆಯಾಣ್ಮರೊಡ
ನೈದಲು ॥
ಕುಸಿದು ಬಲ ಸುರರಡಗಲಸಮ ಸಾಹಸಿ ವಿದಲ ।
ನೊಸಗೆಯಿಂದನುಜ ರಕ್ಕಸರೊಡನೆ ವಿಜಯಂ ಬಲ ।
ದೆಸುಗೆ ಭರದೊಳೋಲಗದೊಳೆಸೆದನಾಸನವೇರುತಂಸುರ
ಲೆಂತಾ ಬಿಂಕವ ॥

ರಾಗ ಸಾಂಗತ್ಯ ರೂಪಕತಾಳ

ಅತ್ತಲಾ ಸುರಪಾಲ । ನಾಪ್ತ ದಿಕ್ಪತಿಗಳ ।
ಗುಪ್ತದೊಳೊಡಗೊಂಡು ಮರುಗಿ ॥ ದೈತ್ಯನು ವರಬಲ ।
ಸತ್ವದಿಂದಲಿ ಗೆಲ । ವೆತ್ತಿದ ಸಾವೆಲ್ಲ ಸೊರಗಿ ॥

ಏನೆಸಗುವುದಿನ್ನಾ । ವಾಣೀಶನನೆ ಮುನ್ನ ।
ಕಾಣುವುದೊಳ್ಳಿತೆಂದೆನುತ ॥ ಧ್ಯಾನಿಸಿ ಬ್ರಹ್ಮನಾ ।
ಸ್ಥಾನಕ್ಕೈದುತ ಬನ್ನ । ಹಾನಿಯ ಪೇಳಿ ವಂದಿಸುತ ॥

ಸರಸಿಜೋದ್ಭವ ಕೇಳಿ । ಹರಿಯೊಡನಿದ ಪೇಳಿ ।
ಪರಿಹಾರ ಕಾಂಬುದೆಂದವರ । ಕರಕೊಂಡ್ಯೈದುತ ಪಾಲ ।
ಶರಧಿಯೆಡೆಗೆ ಬಾಳ । ಸ್ಮರಿಸಿದ ಕೂಡುತೆಲ್ಲವರ ॥

ರಾಗ ಪಂತುವರಾಳಿ ಏಕತಾಳ

ಜಯ ಜಯ ನಾರಾಯಣ । ಜನಾರ್ದನ ।
ಜಯ ಜಯ ಫಣಿ ಶಯನ । ಜಯ ಕರುಣಾಕರ ।
ಜಯ ಖಳ ಭೀಕರ । ಜಯ ಮಂಗಲಕರ ।
ಜಯ ಮಂದರಧರ । ಜಯ ದಾಮೋದರ ।
ಜಯ ಸುಮನೋಹರ । ಜಯ ಭವಭಯ ಹರ ।
ಜಯ ಲಕ್ಷ್ಮೀ ವರ ॥ ಜಯ ॥

Scanned by CamScanner

ಸುರಲೋಕವನು ಮುತ್ತುತ । ಮದಲೋತ್ಪಲ ।
ದುರುಳರು ಘೋರ ಹಮ್ಮೈತ । ಪುರ ನಡುಗಿಸಿ ತರ ।
ತರದುನ್ನತ ಶರ । ಧರಿಸುತಲಬ್ಬರ ।

ಭರದಿಂದಮರರ । ನಿರದಡಗಿಸಿ ಸುರ ।
ವರಶಿಖಿ ಮುಖ್ಯರ । ಹೊರಡಿಸಿದರು ಹೊರ ।
ಪೊರೆ ನೀ ಶ್ರೀಕರ ॥ ಜಯ ಜಯ ನಾರಾಯಣ ॥

ಕಂದ ಪದ್ಯ

ನಿತ್ತಿಹರಿದೊ ಸುರಪಾದ್ಯರು ।
ಇತ್ತಭಯವ ಪಾಲಿಸೆಂದು ವಿಧಿಯಿಂ ತೆರದಿಂ ।
ಪ್ರಾರ್ಥಿಸಲಮರರು ಸಹಿತಂ ।
ಪ್ರತ್ಯಕ್ಷದಿ ಕಾಣಿಸುತ್ತ ಹರಿ ನಗುತೆಂದಂ ॥

ರಾಗ ಸುರುಟಿ ಏಕತಾಳ

ಏಳಿರೇಳಿರೇಳಿ । ಸ್ತುತಿ ಸಾ ।
ಕಾಲಿಸಿದೆನು ಕೇಳಿ । ಖಳರ ಭಯ ಬಿಡಿ ।
ತಾಳಿರಿ ಗಡಿಬಿಡಿ । ಗೋಳೇತಕೆ ನುಡಿ । ಪೇಳುವೆ ಕಿವಿಗೊಡಿ ॥

ಸರಸಿಜಭವನಿವನು । ಖಳರಿಗೆ ವರಗಳನಿತ್ತವನು ।
ದುರುಳರ ಕೊಲಲಳ । ಪುರುಹರಿಗಿದನೊಲ ।
ವಿರಿಸಿ ಹರಸಿ ಬಲ । ಬರಿಸಿ ದೊರೆತ ಫಲ ॥

ಏನ ಗೈಯಲಾನು । ಮೊದಲೇ । ಧ್ಯಾನಿಸದೀಗಿನ್ನು
ಕಾಣಿಸು ಪಥವೆನೆ । ತ್ರಾಣಕೆ ಯೂಹೆರ್ಣೆ ।
ಸ್ಥಾನ ಸುರಕ್ಷಣೆ । ಗುನಲು ಯಿದಕೆಣೆ ॥

ಭಾಮಿನಿ

ಎಂದು ಯೋಚಿಸಲಿದ ನಿವಾರಣೆ ।
ಹೊಂದಿಸುವದೆಂತರಿಯೆನಾದರು ।
ಬಂದುದನು ನೀಗಾಡಿಸಲೆಬೇಕದಕೆ ನಾವಲ್ಲ ।
ಚಂದ್ರಧರನೆಡೆಗೈದಿ ಪ್ರಾರ್ಥಿಸೆ ।
ಚಂದವೆನುತ ಮುಕುಂದನವರೊಡ ।
ನಂದು ಜೊತೆಗೊಂಡೈದಿದನು ರಜತಾದ್ರಿಯೆಡೆಗತ್ತ ॥

ಕಂದ ಪದ್ಯ

ರಜತಾದ್ರಿಗೆ ಗಮಿಸುತ್ತಂ ।
ಬುಜನೇತ್ರಂ ವಿಧಿ ಬಿಡೌಜ ಮುಖ್ಯರು ಸಹಿತಂ ।
ಭುಜಗಾಭರಣನ ನಾಮವ ।
ಭಜಿಸಿದರತಿ ಭಕ್ತಿಭಾವದಿಂ ಪ್ರಾರ್ಥಿಸುತಂ ॥

ರಾಗ ಶಂಕರಾಭರಣ ಏಕತಾಳ

ಪಾಲಿಸು ಪಾರ್ವತಿ । ಲೋಲ ಪರೇಶ । ಕಾಲ ಕಂಧರ ಕಾಲ ।
ಕಾಲ ಗಿರೀಶ । ಪಾಲಿಸು ಶಂಕರ । ಖೂಳ ಭಯಂಕರ ।
ಲೀಲಾಮಯ ಕರು । ಣಾಳು ಶುಭಂಕರ । ಕಾಳಗ ಪಟು ಶಿರ ।
ಮಾಲ ದಯಾಕರ । ಶೂಲಾಯುಧ ಧರ ।
ಫಾಲಾಂಬಕ ಹರ ॥ ಪಾಲಿಸು ॥

ಖಳ ವಿದಲಾಂಕೋ । ತ್ಪಲರೆಂಬೀರ್ವರು । ಬಲ ಸಹ ಸುರಲೋಕ ।
ಬಳಸುತಲವರು । ಬಲುಮೆಯು ಭೀಕರ । ಛಳುಕದೆಯಮರರ ।
ಗೆಲಿದಟ್ಟುತ ಹೊರ । ಬಲರಿಪು ಮುಖ್ಯರ । ಬಳಲಿಸುತಬ್ಬರ ।
ದೊಳಗಿಹರಸುರರ । ನಳಿಸಿಯು ದಿವಿಜರ ।
ಸಲಹು ಮಹೇಶ್ವರ ॥ ಪಾಲಿಸು ॥

ಕಂದ ಪದ್ಯ

ಹರಿಯಜ ಮುಖ್ಯರು ಪ್ರಾರ್ಥಿಸ ।
ಲರಿತಿದಿರೈದಿ ಕರೆತಂದು ಮನ್ನಿಸುತವರು ।
ಪುರಹರ ನಗುತಂ ಬಳಿಕು ।
ಳ್ಳಿರಿಸುತೆಂದಂ ವಿನೋದದಿಂ ಶ್ರೀಧರಗಂ ॥

ರಾಗ ಮಾರವಿ ಏಕತಾಳ

ಏನಿದೇನು ಭಾವ । ನಿನ್ನದಿ । ದೀನವೀನ ಭಾವ ।
ನೀನೆನ್ನನು ಬಲು । ಧ್ಯಾನದಿ ಪೊಗಳಲು ।
ನಾನಾರ್ನವ್ಮೊಳು । ಕಾಣದು ಬದಲು ॥

ವರವನಿತ್ತು ವಿಧಿಯು । ಖಳರಿಗೆ । ಸುರರಿಗಿಂಥ ವಿಧಿಯು ।
ಬರಲಿವ ಪರಿಹರಿ । ಪರೆ ಸಾಧ್ಯವೆ ಹರಿ ।
ಯರಿಯೆಯ ಪುರುಷರಿ । ಗರಿದೆಂಬುದ ಸರಿ ॥

Scanned by CamScanner

ಹರಿಯೇ ನಿನ್ನ ತಂಗಿ । ಇಲ್ಲಿಯೆ । ಇರುವಳಲ್ಲ ತಂಗಿ ।
ಮರುಳ ಖಳರ ತರಿ । ಪರೆ ನೀ ಮಾತರಿ ।
ತೊರೆದರೆ ಖಾತರಿ । ತರುವಳು ಜಯಸಿರಿ ॥

ರಾಗ ಕೇದಾರಗೌಳ ಝಂಪೆತಾಳ

ಹರಿಯೆಂದನಹುದಂ ವೃಥನೆ । ನಾರಿಯಿಂ ।
ಮರಣ ಬಹುದವರಿಗೊಡನೆ ॥ ದುರುಳರಂ ಕೊಲುವಳೆಂಬೆ ।
ದಿಟವು ನಾ । ಕರೆದೀಗಲವಳೊಳೆಂಬೆ ॥

ಬಾ ತಂಗಿ ಬಾ ಭವಾನಿ । ದುರ್ಗೆ ಗಿರಿ ।
ಜಾತೆ ಶುಭ ಕೀರವಾಣಿ । ಭೀತಿಯಿಂದಿಹ ಸುರರನು ।
ಸಲಹು ವಿ । ಖ್ಯಾತೆ ಸಚ್ಚರಿತೆ ನೀನು ॥

ಬಂದಾಗಲಂಬೆ ಭವನ । ಬಳಿ ನಿಂದು ।
ಎಂದಳೇನೇನು ಹವಣ । ಇಂದಿರೇಶನೆ ಕರೆಯಲು ।
ಏನಲು ಗೋ । ವಿಂದನೆಲ್ಲವನೊರೆಯಲು ॥

ಕೇಳಿ ನಗುತೆಂದಳಭವೆ । ಯೆನ್ನೊಳೀ ।
ಲೀಲೆ ನಾಟಕವೆ ವಿಭುವೆ । ತಾಳೆನಿದ ನೀವೀರ್ವರು ।
ಸಾಗದೆನ । ಲೇಳೆ ಬಲಕಾರಿರ್ವರು ॥

ತಂಗಿ ನೀನಿರ್ವೆಯೆಂದೆ । ಹೋರ್ವರೀ !
ಸಂಗತಿಯು ನಿನಗೆಯೆಂದೆ । ಹಂಗಿಪೆಯ ನಮ್ಮ ಚದುರೆ ।
ಒಪ್ಪದಿರೆ । ಸಂಗರಕೆ ಹಿಂದೆ ಚದರೆ ॥

ಎನ್ನ ಬಾಧೆಗೆ ಬಾರದೆ । ಯಾರಿಗೂ ।
ಬನ್ನಗೊಡಲ್ಕೈದೆ ಬರಿದೆ । ಕುನ್ನಿಗಳಂ ಬಂದು ಕೆಣಕೆ ।
ಕೊಂದವರ । ಮಣ್ಣು ಮುಕ್ಕಿಸುವೆ ಕ್ಷಣಕೆ ॥

ಅಷ್ಟೆಸಗು ಸಾಕು ನೀನು । ಬರಲು ಯಾಮ ।
ಪಟ್ಟಣಕ್ಕಟ್ಟವರನು । ಶಿಷ್ಟರೀ ಸುರರೆಲ್ಲರು ।
ಸ್ವಾತಂತ್ರ್ಯ । ಪಟ್ಟಲ್ಲಿ ಸುಖಗೊಳ್ವರು ॥

ಭಾಮಿನಿ

ಎನೆ ಸುಮಂಗಲೆಯಸ್ತು ಕೊಡೆ ಹರಿ ।
ಫಣಿವಿಭೂಷಣನೊಪ್ಪಿಗೆಯ ಪಡೆ ।

ನಿಮಿಷೇಶಾದ್ಯರನು ಕಾದಿರಿ ಸಮಯಮೆಂದರುಹಿ ॥
ವನಜಸಂಭವ ಸಹಿತವರ ಬೀಳ್ಕೊ ।
ಟ್ಟಣಿಯಹುದು ಜಯಗೊಳಲು ದಾರಿಯ ।
ದಣಿಕೆಯಂತೆಂದಸುರಹರನೈದಿದನು ನಿಜ ಗೃಹಕೆ ॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಇತ್ತಲಿಂತಿರೆ ವಿದಲ ಸುರಪುರ । ದತ್ತ ವೈಭವದಿಂದ ಮೆರೆಯೆ ಸ ।
ಮಸ್ತ ಭಾಗ್ಯವನುಣುತ ಸಾಹಸ । ಮತ್ತನಾಗಿ ॥

ಒಂದು ದಿನ ಖಳನನುಜನುತ್ಪಲ । ನಂದದಿಂ ಪತ್ತನದ ಹೊರಪ್ರತಿ ।
ಸಂದುಗೊಂದನ್ನೀಕ್ಷಿಸುತ ಬರೆ । ಮುಂದೆ ಮಂದೆ ॥

ಬರ್ಪ ಸಮಯದೊಳೊಂದು ಕಡೆ ಗಂ । ಧರ್ವಪತಿ
ಭದ್ರಾಖ್ಯನಣುಗಿಯು ।
ಪೂರ್ವ ಸುಂದರಿ ಕುಸುಮ ಮಂಜರಿ । ಸರ್ವಭೂಷೆ ॥

ಗೆಳತಿಯರು ಸಹ ವನದ ಘನಸಿರಿ । ಚೆಲುವ ನಿರುಕಿಸುತಿರಲು ಬಂದಾ ।
ಖಳ ನಿರೀಕ್ಷಿಸಿ ತನ್ನೊಳೀ ಭ್ರುವೆಂ । ತಳೆಯಂತೆಂದ ॥

ರಾಗ ಯಮುನಾಕಲ್ಯಾಣಿ ಏಕತಾಳ

ಅಹಹ ಯಾರಿವಳು ಸುಂದರಿ ನಾರಿ । ಭಲೆ ।
ಯಹಿವೇಣಿ ಕೋಮಲೆ ವೈಯಾರಿ ॥ ಪ ॥

ಮೊಗವೆತ್ತಲಿವಳು ಚಂದಿರನತ್ತ । ಸೋಲ್ವ ।
ನಗೆಯದು ಬೆಳದಿಂಗಳೆನ್ನುತ್ತಾ । ಬಗೆವೊಲಹುದು ಕಾಣದು ಕುತ್ತ ।
ಈ ಸೊ । ಬಗ ಬಣ್ಣಿಸುವರೆ ನಾ ನಿಶ್ಶಕ್ತಾ ॥ ಅಹಹ ॥

ಕನ್ನಡಿಯಂತೆ ಶೋಭಿಪ ಕೆನ್ನೆ । ನೋಡೆ !
ಕಣ್ಣುಗಳರವಿಂದಕೆಣೆ ಕನ್ನೆ । ಚಿನ್ನದ ಮೈಬಣ್ಣ ಥಳಕನ್ನೆ ।
ತಪ್ಪ । ಉನ್ನತ ಸೌಂದರ್ಯ ಸಂಪನ್ನೆ ॥

ತುಂಬಿಗಳೆನಲು ಶೋಭಿಸುತಿಪ್ಪ । ತಲೆ ।
ತುಂಬಿಹ ಕುಂತಳವೆನಿತೊಪ್ಪ । ಬಿಂಬಸಮಾಧರಗೆಣೆಯಪ್ಪ ।
ಸ್ತ್ರೀಯ ಕಾಂಬುದೀಗೆಲ್ಲಿಯು ಸರಿಯೊಪ್ಪ ॥ ಅಹಹ ॥

Scanned by CamScanner

ಭಾಮಿನಿ

ವಿಧ ವಿಧದ ಸ್ತ್ರೀಯರನು ಸೃಷ್ಟಿಸಿ ।
ವಿಧಿಯು ಮನಸಂತೃಪ್ತನಾಗದೆ ।
ವಿಧಿಸಬೇಕಿನ್ನೋರ್ವಳಂ ನೂತನದೊಳೆನುತೆಣಿಸಿ ।
ಸುಧೆಯ ರಸದಿ ಸುವರ್ಣಮಂತೇ ।
ದಧಿಕತರ ಕೌಶಲ್ಯದಿಂದೀ ।
ಸುದತಿಯಂ ನಿರ್ಮಿಸಿದನೆನೆ ಶೋಭಿಸುವಳೀ ಕಾಂತೆ ॥

ಕಂದಪದ್ಯ

ರಂಭೆ ತಿಲೋತ್ತಮೆ ಮೇನಕೆ ।
ಯೆಂಬಪ್ಸರೆಯರ ಪಳಿವೀ ಕಾಮಿನಿಯಂ ॥
ಸಂಭ್ರಮದಿಂ ವರಿಸುವೆನಂ ।
ದಬುಜಮುಖಿಯುಂ ನುಡಿಸಿದನುತ್ಪಲ ಖಳನುಂ ॥

ರಾಗ ಬೇಗಡೆ ಏಕತಾಳ

ನಾರಿಮಣಿ ನೀ । ನಾರಿರುವಿ ನಿನ್ನ ।
ಪೆಸರೇನು ಪೇಳು ವಿ । ಚಾರಗೆಳ ವಿ ।
ಸ್ತಾರದಿಂ ಚಿನ್ನ । ನೀರೆ ನವ ಶೃಂಗಾರೆ ಮೋಹ ವಿ ।
ಕಾರೆ ರಮ್ಯಾ । ಕಾರೆ ಸುಮಶರ ।
ವೀರೆ ಕ್ಷಣ ಪರಿ । ಹಾರೆ ಮಂಜುಳ ।
ಹಾರೆ ನಡುನಗೆ । ಬೀರೆ ಶುಭಕರೆ ॥

ಶೋಣಿತಾಧಿಪ । ಗಾನು ಸಹಜಾತ ।
ಧುರಧೀರನುತ್ಪಲ । ಕ್ಷೋಣಿ ಮೂರೊಳು ।
ತ್ರಾಣಿ ವಿಖ್ಯಾತ । ವಾಣಿ ನರವರ ।
ದಾನವನುವರ । ದಾನವಾಮರ ।
ಮಾನವರೊಳಿರ । ಲೇನು ಭಯ ಬರ ।
ಹಾನಿ ಪುರುಷರ । ಶ್ರೇಣಿಯಿಂದಿರ । ದೀ ನುಡಿಯಂ ತೆರ ॥

ಚಂದ್ರಮುಖಿ ತವ । ಚಂದಮಂ ನೋಡಿ ।
ಮನವಿತ್ತೆ ವರಿಸೊಲ । ವಿಂದಲೇನಲಿ ।
ಬಂದ ತನುನೀಡಿ । ಬಂದು ಕೈಪಿಡಿ ।

ಯಿಂದೆ ಸಂಖಪಡಿ । ಯೊಂದು ಮೃದು ನುಡಿ ।
ಯೆಂದರಾಯ್ತುಡಿ । ಯಿಂದ ಮೇಲ್ಮುಡಿ ।
ಯಂದ ನಿನ್ನಡಿ । ಗೆಂದರಿತು ತುಡಿ । ದೊಂದಿಗೇ ನಡಿ ॥

ಕಂದ ಪದ್ಯ

ನುಡಿ ಕೇಳ್ದಾ ಸುಮ ಮಂಜರಿ ।
ಕಡು ಕೋಪವನಾಂತುಂ ಕಣ್ಣೊಳುರಿ ಸೂಸುತ್ತುಂ ।
ದೃಢ ಮಾನಸದಿಂ ಬೆದರದೆ ।
ಧಡಿಗಂಗೆಂದಳು ಕರಾಳೆಯಾಗುತಲಾಗಂ ॥

ರಾಗ ಭೈರವಿ ಏಕತಾಳ

ಛೀ ಮೂರ್ಖನೆ ಸಾರತ್ತ । ನಿ । ನ್ನೀ ಮಾತೆನ್ನೊಳು ವ್ಯರ್ಥ ॥
ಸಾಮಾನ್ಯಳಂ ನಾನಲ್ಲ । ಬಿಡು । ಕಾಮುಕತನವನ್ನೆಲ್ಲ ॥

ಗಂಧರ್ವಾಧಿಪ ಭದ್ರ । ಮಮ । ತಂದೆ ಪರಾಕ್ರಮ ರುದ್ರ ।
ತಿಂದೇ ಬಿಡುವನು ನಿನ್ನ । ನಡೆ । ಹಂದೆಯೆ ಬದುಕೈ ಮುನ್ನ ॥

ನೆನೆಸಲು ನಾನೀ ಕ್ಷಣದಿ । ಬಂ । ದನುವಪ್ಪನು ಇಲೆ ರಣದಿ ।
ನಿನಗವಸಾನವು ಸಿದ್ಧ । ಅವ । ನೆಣಿಸಿದ ರೂಪ ಪ್ರಸಿದ್ಧ ॥

ರಾಗ ಕೇದಾರಗೌಳ ಝಂಪೆತಾಳ

ನಾಕು ನಾಕಬಲೆ ಬರಿದೆ । ಇಂಥ ಮಾ । ತೇಕೆನ್ನ ಬಳಿ ಬಾರದೆ ।
ನೂಕುವೆಯು ಬಂದ ಭಾಗ್ಯ । ನಾ ಖ್ಯಾತ । ನಾಕವನೆ ಪಡೆದ ಯೋಗ್ಯ ॥

ಯೋಗ್ಯನಾಗಿರಲು ನೀನು । ನಡೆ ಹಿಂದೆ । ಶ್ಲಾಘ್ಯವದು ನಿನಗೆನ್ನನು ।
ಭಾಗ್ಯವುಣಲಿಲ್ಲೆ ಬಿಡಲು । ಒಡನೆಯಾ । ರೋಗ್ಯಕರವಪ್ಪುದೊಡಲು ॥

ಭದ್ರೆ ಕೇಳ್ನಿನ್ನ ಪಿತನು । ಗಂಧರ್ವ । ಭದ್ರನೆಂದೆನಿಪಾತನು ।
ಯುದ್ಧಕೈದಿದರೆ ಹೊಡೆದು । ನಿನ್ನ ನಾ । ನ್ನೊಯ್ದಪೆನು
ಕೈಯಂ ಪಿಡಿದು ॥

ಪಂಥವೇತಕೆ ಭ್ರಷ್ಟನೆ । ನಿನ್ನವರಿ । ಪಂಥವಳದಲ್ಲೆಷ್ಟನೆ ।
ಹಿಂತೆಗೆದರೊಳಿತು ಮನವ । ಮುಂದರಿಯ । ಲಂತಕನೆ
ನಿನಗೆ ಮುನಿವ ॥

भामिनि

दुष्टनाक्षण बिडेनु बिडेनं ।
दट्टहासदोळेळलबलेयुं ।
केट्टेनय्यो केडुकनिवनो गैवनो यॆनुत ।
घट्टनेन्नप्पय्य बाबा ।
भ्रष्टनं संहरिसि यमुनेडे ।
गट्टि सुतेयुं पालिसेनुतलि मनदि स्मरिसिदळु ॥

राग सौराष्ट्र त्रिवुडे ताळ

अत्त गंधर्वेश भद्रगे । पुत्रियळलरिवागे प्रळयंद ।
मृत्युवेने गर्जिसुत यारव । धूर्त खळनु ॥

मूरु लोकव मत्तबल्लव । वीररण संहार भैरव ।
धीरनी गंधर्वपतिगव । नारु मुनिव ॥

भद्रनणुगियु केणकला हरि । रुद्ररे बरलेनलिकारिव ।
कुद्र दानवनवननी क्षण । भिद्रगैवे ॥

एंदु भद्रमनोसुवेगदि । बंदु सुतेगभयवनु पालिसि ।
निंदिदिरु गर्जिसुत दैत्य म । दांधगोरेद ॥

राग भैरवि एकताळ

यारेलवो खळ नीनु । सुकु । मारियुं बाधिसुववनु ।
होरुवे निन्नयु हरण । बरे । होरलु गणिसेनु हरनु ॥

हरनेतके निनगानु । दै । त्यर पति विदलानुंजनु ।
सुरपुरवनु गेद्दिल्लि । ई । गिरुवेनु बलभद्रदलि ॥

भद्रद बलवन्निरिव । ई । भद्रन नीनेनरिवे ।
भद्रेयिमळ केणकिदेयु । निलु । भिद्रिसुवेनु क्षणकिदेयु ॥

एसे रोषदोळुत्पलनु । बिडे । घनतरदुरि शरगळनु ।
क्षणदोळदनु तरिदिट्ट । भ । द्रनु गणिसदे कलि दिट्ट ॥

भामिनि

कादिदरु बलु विधदि बळिक वि ।
रोधदिंदीरुवरु वरद प्र ।

सादरिं खळन शक्तियुं वर्धिसुत्तिरलु ।
साधिसदं गेलवेंदु तिळिदु प्र ।
मादकेडेगोडदोडने भद्रनं ।
शोधिसिद महायमुनि सुते सहित्दैदिदनु गृहकॆ ।

कंद पद्य

सखियरु सहितं खळ स ।
समन्मुखदिं तोलगल्कयुच्चरियुदिंदवनुं ।
यमकुतियोळ्दिदरेंददद ।
प्रकटिसदास्थानकं गमिसिदं भरदिं ॥

राग भैरवि झंपेताळ

आस्थानदोळु विदल । नुत्साहदिंद ल ।
त्यास्त सचिवेश दळ । मोत्तपति प्रबल ॥

प्रमुखरोडनेसदिरलु । समयकंत्पल बरलु ।
क्रमदंते मुख्यरोळु । गमनिपनितरोळु ॥

हरनाम कीर्तिसुत । सरसिजोद्भवन सुत ।
बरलेद्दु खळनाथ । नेरगि मन्निसुत ॥

नारदने नी बंद । कारियुव भरदिंद ।
सारेनलु मुनियुंद । नी रीतियिंद ॥

राग मधुमाधवि एकताळ

धणरे मेच्चिदेनय्य । दनुज कुलार्य ।
धनकनकैश्वर्य । केणे पेळलर्य ॥ प ॥

मूरु लोकदोळिंथ । धीररारिल्ल ।
धारुणियोळगिंतु । सारुवरेल्ल ।
ई रीति संरक्षित । वेरिद मल्ल ।
बेरावनमररु । जारिदरल्ल ॥ धण ॥

ಸಾಮಾನ್ಯನೇ ನೀನು । ಸಾಮರ್ಥ್ಯದಲ್ಲಿ ।
ಕಾಮಾರಿ ಹರಿ ಬ್ರಹ್ಮ । ರೇ ಮುಂನಿದಿಲ್ಲಿ ।
ಕೈಮಾಡದಿರ್ಪರಂ । ಕ್ಷೇಮದಿಂದಲ್ಲಿ ।
ನಾಮವೆತ್ತಲಿಕಂಥ । ಭೀಮರಿಂದೆಲ್ಲಿ ॥ ಧಣಂ ॥

ಇಂತಿದ್ದರೂ ನೀ । ಸ್ವಂತ ವಿಚಾರ ।
ಚಿಂತಿಸುತಿಲ್ಲವೆಂ । ಬಂಥ ಪ್ರಚಾರ ।
ಬಂತೆನ್ನ ಕಿವಿಗದ । ರಂತರ ಸಾರ ।
ಆಂತಿಹೆನಾಯ್ತು ತ । ನ್ನಂತೆ ಪ್ರಸಾರ ॥ ಧಣಂ ॥

ಪರಮೇಶನರಸಿಯೂ । ಪರಮೇಶ್ವರಿಯುನು ।
ಆರಿಯೆಯು ಕಾಯು । ಸೌಂದರಿಯು ದುರ್ಗೆಯುನು ।
ಧುರವೆನಲಂಜದೆ । ಮೆರೆವಂಬಿಕೆಯುನು ।
ಸುರರನು ಪೊರೆಯುಂವ । ಗಿರಿಜಾ ದೇವಿಯುನು ॥ ಧಣುರೇ ॥

ಅಂಬಿಕೆ ಕೊಂದಳು । ಶುಂಭಾದಿಗಳನು ।
ಎಂಬಾಗ ನೀ ಶೌರ್ಯ । ತುಂಬಿದಗ್ಗಳನು ।
ಎಂಬುದೆ ಸುಮ್ಮನೆ । ಯುಂಬುಧಿ ಬಲನು ।
ಗಂಭೀರ ವಿಷಯಾ । ರಂಭೆ ನಿಚ್ಚಳನು ॥ ಧಣುರೆ ॥

ನಿನ್ನ ವಂಶದ ಮಾನ । ವನ್ನು ನೀನುಳಿಸು ।
ಉನ್ನತಿಗೆಯು ಕಪ್ಪು । ಬಣ್ಣವನಳಿಸು ।
ಧನ್ಯನಾಗಲು ಜಯು । ಕನ್ನೆಯುನೊಲಿಸು ।
ನಿರ್ಣಯು ಸತ್ಕೀರ್ತಿ । ಮನ್ನೆಯಂನೆನಿಸು ॥ ಧಣುರೆ ॥

ಭಾಮಿನಿ

ಆಂಬಿಕೆಯು ತ್ರೈಲೋಕ ಮೋಹಿನಿ ।
ಸಂಭವಿಸೆ ಜಯು ನಿನ್ನ ಭಾಗ್ಯವು ।
ತುಂಬಿದಂತೆಯೆ ತಿಳಿಯಿತೇ ನೀ ಸಾಧಿಸಿದನೊಡನೆ ।
ಎಂಬುದನು ನಾನೆಂದೆನ್ನೈದುವೆ ।
ನಿಂಬರೆಡೆಯಿಲ್ಲೆನುತ ನಾರದ ।
ಶಂಭು ಶಂಕರಯೆಂದು ನುತಿಸುತ ಸಾರ್ದ ಸಂತಸದಿ ॥

ಕಂದ ಪದ್ಯ

ಹರಿ ಮೆನದಿಷ್ಟವ ಗೈದಿಹ ।
ಹರುಷದಿ ನಾರದ ಮುನೀಂದ್ರನೈದಲ್ ವಿದಲಂ ।
ಕೆರಳುತ ಶುಂಭಾಖ್ಯರನಾ ।
ತರುಣಿಯು ಕೊಂದಳೆಯೆಂನುತ್ತ ಸಭೆಯೊಳಗೆಂದಂ ॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಅನುಜ ಸಚಿವಾದಿಗಳು ಕೇಳ್ದಿರೆ । ಮುನಿಪನೆಂದುದ ಶುಂಭ ಮುಂಖ್ಯರ ।
ವನಿತೆಯುಂಬಿಕೆ ಕೊಂದಳೆಂಬುದ । ನೆಣಿಸಿ ನೋಡಿ ।

ಕೊರತೆಯಲ್ಲವೆ ನಮಗೆ ಮುಘವಾ । ದ್ಯರನು ಸೋಲಿಸಿ
ಫಲವದೇನಿದೆ ।
ತರುಣಿಯುನು ಪಿಡಿದೆಳೆದು ತಪ್ಪದೆ । ಸರಿಯು ಶಾಸ್ತಿ ॥

ಸಾರಿ ರಜತಾದ್ರಿಯುನು ಮುತ್ತುತ । ನಾರಿಯುನು
ತರಲೈದುವೆನುಯೆನೆ ।
ಆರುಭಟೆಯಿಂದೆಂದನುತ್ಪಲ । ಹಾರಿ ಮುದದಿ ॥

ಅಣ್ಣ ನೀನಿದಕೇತಕೈದುವೆ । ಹೆಣ್ಣ ಹಿಡಿದೆಳತರುವುದೇತರ ।
ಗಣ್ಯವದು ತಂದೊಪ್ಪಿಸುವೆ ನಾ । ನಿನ್ನ ಪದಕೆ ॥

ಸುಬಲನುಸುರಿದನಾಗ ನಾನಿಹೆ । ಪ್ರಭುಗಳೇತಕೆ ಹೊರಡುವುದು ನೀ ।
ವುಭಯುರಿಲ್ಲಿರಿ ತರುಪನೀಕ್ಷಣ । ಕಬಲೆಯುಳನು ॥

ಎಂದ ಸೇನಾಪತಿ ಪ್ರಬಲನಿ । ದೊಂದು ಕಾರ್ಯಕೆ ನೀವದೇತಕೆ ।
ತಂದು ಪದಕರ್ಪಿಪೆನು ನಾನೇ । ಸುಂದರಿಯುನು ॥

ಭಾಮಿನಿ

ಕೇಳುತೆಲ್ಲವ ವಿದಲ ಸಾಹಸ ।
ಶಾಲಿಗಳಂ ನೀವಹಂದು ಖರೆ ನಾ ।
ನೇಳುವೆನು ಜೊತೆ ಬನ್ನಿರೆಂದುಸುರುತಲಿ ಬಳಿಕವನಂ ।
ಕಾಳಗದ ಸಿದ್ಧತೆಯೊಳಾಕ್ಷಣ ।
ಪಾಳೆಯುವನೊಡಗೊಂಡು ಸಾರುತ ।
ಧಾಳಿಯಿಟ್ಟನು ಬಪ್ಪುದರಿಯಂದೆ ರಜತ ಪರ್ವತಕೆ ॥

Scanned by CamScanner

ಕಂದ ಪದ್ಯ

ಎಲ್ಲಿಹಳಂಬಿಕೆ ಬರಲೆಂ ।
ದಲ್ಲಿಯು ಕಾವಲಗಣಗಳೊಳರುಹಲ್ಕಾಗಂ ।
ನಿಲ್ಲಿರಿ ಸಂಮ್ಮನೆಯೆಂನಂತವ ।
ರಲ್ಲೋರ್ವ ಸಾರ್ದು ಪೇಳ್ದ ಹರಗೆರಗುತ್ತಂ ॥

ರಾಗ ದುಂಖಾರಿ ಏಕತಾಳ

ಲಾಲಿಸು ದೇವರ ದೇವ ಗಿರೀಶ । ಪನ್ನಗ ಭೂಷ ।
ಲಾಲಿಸು ದೇವರ ದೇವ ಗಿರೀಶ । ಲಾಲಿಸು ಶಶಿಧರ ।
ಕಾಲ ಸುಕಂಧರ । ಖೂಳ ಭಯಂಕರ । ಲೀಲಾ ಶಂಕರ ॥ ಲಾ ॥

ವಿದಲೋತ್ಪಲರೆಂಬ । ದುಷ್ಟ ಸೋದರರು ।
ದನುಜೇಶ್ವರರು । ಮಂದಮುಂಖ ದೈತ್ಯರ ಕೂಡಿ ಬಂದಿಹರು ।
ವಿಧ ವಿಧ ದರ್ಪವ । ನೊದರುತಲಿರ್ಪವ ।
ರದುಭುತರಲ್ಪರ । ಅಧಟಗೆ ಮುಪ್ಪಿರ ॥ ಲಾ ॥

ಅಂಬಿಕೆ ಎಲ್ಲಿಹಳೀಕ್ಷಣ ಬರಲಿ । ದರ್ಪ ಬಿಟ್ಟಿರಲಿ ।
ಸಾಂಬನಿಗನ್ನಿ ಜಾಗ್ರುತೆ ಕರತರಲಿ । ಎಂಬರು ಹಂಲು ಖಳ ।
ರುಂಬರದರ ಫಲ । ಹುಂಬರದೇನ್ಫಲ ।
ಶಂಭೋ ಮಾಬಲ ॥ ಲಾ ॥

ಭಾಮಿನಿ

ಗಣ ಭಯದೊಳಿಂತೆನಲಂ ಕೇಳುತ ।
ಗಣಿಸಿ ಮನದಲಿ ಮುಂದಕಪ್ಪುದ ।
ಗಣಪನವ್ವೆಯ ಕೆಣಕಲೈದಿದ ಖಳರಿಗವಸಾನ ॥
ಸನಿಹವಾಯ್ತೆಂದರಿತು ನಗುತಲಿ ।
ಫಣಿವಿಭೂಷಣ ಕರೆಯುತಾಕ್ಷಣ ।
ಅನಿಮಿಷಾರ್ಚಿತೆ ಭಯ ವಿಸರ್ಜಿತೆಯುಗಜೆಗೊಡನೆಂದ ।

ರಾಗ ಬೇಗಡೆ ಝಂಪೆತಾಳ

ಬಾರೆ ಬಾರೆ ಭವಾನಿ । ಬಾರೆ ಮಂಜಂಳವಾಣಿ ।
ಬಾರೆ ಪನ್ನಗವೇಣಿ । ಬಾರೆ ಗಿರಿಜಾತೆ ನೀ ॥

ವಿದಲೋತ್ಪಲರು ಕರೆವ । ರದೊ ಗಿರಿಯ ಮಂತ್ರಿರಂವ ।
ರದುಭುತರು ನವಂಗೊರೆವ । ಡಧಟನೇನ್ಗರಂವ ॥
ಏನ ಮಾಡಂವುದೀಗ । ದಾನವರಂ ಕರೆದಾಗ ।
ಲಾನು ಗಮಿಸುವುದಾಗ । ದೇ ನುಡಿಯೆಂ ಬೇಗ ॥

ಕಂದ ಪದ್ಯ

ಹರನೀ ತೆರದಿಂ ನಗುತಲಿ ।
ಸರಸದೊಳಾಡಲಂ ಭವಾನಿ ಕೇಳ್ದದನೆಲ್ಲಂ ।
ದುರುಳರು ಗಿರಿಯುಂ ಮುಂತ್ತುತ ।
ಕರೆದಿರಲೆನ್ನಂ ವಿನೋದವೇಯೆನುತೆಂದಳ್ ॥

ರಾಗ ಭೈರವಿ ಏಕತಾಳ

ಸರಸವೆಯೆನ್ನೊಳು ಕಾಂತ । ಈ । ಗಿರುವವೆ ನಾವೇಕಾಂತ ।
ಕರೆಯಂಲು ಖಳರತಿ ಮುದದಿ । ಇಂ । ತೊರೆವುದು ಸರಿಯೇ ಮಂಂದದಿ

ಬಲ್ಲೆನು ನಾನಿದನೆಲ್ಲ । ಆ । ಖುಲ್ಲರ ತರಿವೆಯ ನಲ್ಲ ।
ಸಲ್ಲದು ನಿನಗೆನ್ನಿಂದ । ಕೊಲಿ । ಪುಲ್ಲಾಸಕ್ಕಾನಂದ ॥

ಕೆಣಕಿದ ಮೇಲಿನ್ನವರ । ನಾ । ಕ್ಷಣವುಳುಹುವನೇ ಬವರ ।
ಎನಗೇನ್ಗಣ್ಯವೆ ನೀಡು । ಅ । ಪ್ಪಣೆಯಂ ಕಾರ್ಯವ ನೋಡಂ ॥

ಭಾಮಿನಿ

ಲಂಬಿಕೆಯ ನುಡಿ ಕೇಳಂತಾಗ ತ್ರಿ ।
ಯಂಬಕನು ಸರಿ ಸಾಗು ನೀನು ವಿ ।
ಳಂಬಿಸದೆ ಜೊತೆಗಿರಲಿ ಗಣಗಣವೆನಲಿಕಹುದೆಂದು ।
ಶುಂಭ ಮರ್ದಿನಿ ಮಗನೆ ಬಾ ಹೇ ।
ರಂಬ ಬಾ ಗುಹ, ಕಾಲಭೈರವ ।
ರುಂ ಬರಲಿ ಬಾ ವೀರಭದ್ರ ಸಮುದ್ರ ಬಲಭದ್ರ ॥

ಕಂದಪದ್ಯ

ಎಂದಗಜಾತೆಯು ಕರೆಯಲ್ ।
ಬಂದವರೆರಗುತ ವಿಚಾರಮಂ ತಿಳಿದೆಲ್ಲಂ ।
ನಿಂದಬ್ಬರಿಸುತ ಮಂಹಾಪಿಕ ।
ಸ್ಯಂದನನೆಂದಂಭ ವಾನಿಗಂ ಶೌರ್ಯದೊಳಂ ॥

Scanned by CamScanner

ರಾಗ ಮಾರವಿ ಏಕತಾಳ

ಮಾತೆಯು ಹುಲು ಖಳ । ವ್ರಾತವ ನೀ ಕೊಲ ।
ಲೇತಕೆ ಸಾಗುವುದು । ಪಾತಕಿಗಳ ಗಳ ।
ಘಾತಿಸಿ ಜಯಗೊಳ । ಲಾತುರವೆನಗಹುದು ॥

ಅಲ್ಪರವರ ರಣ । ಬಲ್ಸಳಿಯದು ಕ್ಷಣ ।
ಕಪ್ಪಳಿಸುವೆ ಧುರದಿ । ಅಪ್ಪಣೆ ಕೊಟ್ಟೆನ ।
ಗೊಪ್ಪಿಸಿದನುಮನ । ತೃಪ್ತಿಗೊಳಿಪೆ ಭರದಿ ॥

ಸ್ಯಂದನೊರೆದ ನಾ । ಮುಂದಿಹೆ ಸೇನಾ ।
ವೃಂದವ ಬೇಡೆನಗೆ । ಬಂದ ಖಳರ ಕ್ಷಣ ।
ಕೊಂದು ಬರುವೆ ರಣ । ದಿಂದೇತಕೆ ನಿನಗೆ ॥

ತರಳನ ಸಾಹಸ । ವರಿಯೆಯ ನೀ ಹೊಸ ।
ತರವೇನೀ ಕಾರ್ಯ । ಮೆರೆಸುವೆ ಪೌರುಷ ।
ತರುವೆನು ಜಯಯಶ । ಕರುಣಿಪುದಪ್ಪಣೆಯಾ ॥

ಆಕ್ಷಣಕುಸುರಿದ । ದಕ್ಷಾರಿಯು ಮದ ।
ದಾ ಕ್ಷ್ಣಲ್ಲಕರೇನು । ಲಕ್ಷ್ಯವೆ ತರಿದಾ ।
ನೀಕ್ಷಿಪೆ ಜಯವದ । ದಕ್ಷತೆ ಕಾಣಿಪೆನು ॥

ನುಡಿದನು ಭೈರವ । ಕೊಡಲಪ್ಪಣೆ ರವ ।
ವಡಗಿಸುತೀ ಕ್ಷಣದಿ । ಕೆಡಹಿ ಖಳೌಘವ ।
ಪಡೆವೆನು ವಿಜಯವ । ದೃಢ ನಾನೀ ರಣದಿ ॥

ಭಾಮಿನಿ

ನುಡಿಯ ಕೇಳ್ದಂಬಿಕೆಯು ನೀವೆ ।
ನ್ನೊಡನೆ ಬಂದಲ್ಲಿರ್ಪ ರಾಕ್ಷಸ ।
ಪಡೆಯನಳಿಸಿರಿ ಕೊಲುವೆ ವಿದಶೋತ್ಪಲರ ನಾನೆನುತ ।
ಪಡೆದು ಹರನಾಜ್ಞೆಯನು ಗಮಿಸಲು ।
ಘುಡುಘುಡಿಸಿ ಗಣರೈದಿ ಖಳ ಬಲ ।
ಕೆಡಹೆ ಸುಬಲಂ ತಡೆಯೆ ಭೈರವನೆಂದನಿದಿರಾಗಿ ॥

ರಾಗ ಭೈರವಿ ಏಕತಾಳ

ನೀನಾರೆಲ ಖಳ ಧೂರ್ತ । ಹುಲು । ದಾನವ ಪಡೆ ಬಂದಿತ್ತ ।
ಹಾನಿಯನೆಸಗುವುದೇಕೆ । ಇ । ನ್ನಾನಾಸ್ಪದ ಕೊಡೆನಿದಕೆ ॥

ಶೋಣಿತ ಪುರಪತಿ ವಿದಲ । ಅವ । ಗಾನು ಪ್ರಧಾನಿಯು ಸಂಬಲ ।
ಆಣತಿ ದೊರೆಯದ್ದೆನಗೆ । ಜೊತೆ । ಸೇನೆಯು ಕಾರ್ಯಾರ್ಪಣೆಗೆ ॥

ಅಂತಹ ಕಾರ್ಯವದೊಂದು । ನುಡಿ । ದಂತಾಗದು ನಲಿದಿಂದು ।
ಬಂತುತ್ಯವು ನಿಮಗೆಲ್ಲ । ಇದಿ । ರಾಂತರೆ ನಿಲಿಸುವೆ ಗುಲ್ಲ ॥

ಎನೆ ಕೋಪದೊಳಾ ಖಳನು । ಬಿಡೆ । ಕಣೆಯೊಂದನು ಭೈರವನು ।
ಕ್ಷಣದೊಳದನು ಕಡಿದೆಸೆದ ! ಆ । ದನುಜನುರಿದು ಪಲ್ಮಸೆದ ॥

ಸುರಿಸಲು ಶರಮಳೆ ಸುಬಲ । ಪರಿ । ಹರಿಸಿದ ಭೈರವ ಪ್ರಬಲ ।
ಹರನ ಸ್ಮರಿಸುತೊದೆದೊಡೆದು । ಆ । ದುರುಳನ ಕೆಡಹಿದ ಸದೆದು ॥

ಸಂಬಲನಳಿವಂ ಕಂಡು ಪ್ರಬಲಂ ಮುಂದೈತರಲ್ ।
ವೀರಭದ್ರನಡ್ಡೈಸಿ—

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ನಿಲ್ಲು ನಿಲ್ಲು ಖಳಾಧಮನೆ ನೀ । ನೆಲ್ಲಿಗೈದುವೆ ನಿನ್ನನೀಕ್ಷಣ ।
ಕೊಲ್ಲುವೆನು ನಾ ವೀರಭದ್ರನು । ಮಲ್ಲನಿಹೆನು ॥

ವೀರಭದ್ರನೆನುತ್ತ ನೀನೇ । ಕಾರುಭಟಿಸುವೆ ವೈರಿಕುಲ ಸಂ ।
ಹಾರ ಭೈರವ ನಾನು ದಳಪತಿ । ಧೀರ ಪ್ರಬಲ ॥

ಪ್ರಬಲ ದಳಪತಿಯಾದರೇ ನೀ । ಪ್ರಭು ಮಹೇಶನ ಭಕ್ತನಿದಿರಲಿ ।
ಪ್ರಬಲನಲ್ಲವು ಮಿನ್ಹುಳವು । ರವಿ ಪ್ರಭೆಗೆ ಸಮವೇ ॥

ಸುರನರೋರಗರೆನ್ನ ಕೆಣಕಲು । ಶಿರವನೆತ್ತರೆನಲ್ಕೆ ನೀನಿದ ।
ನರಿಯದೇತಕೆ ಬರಿದೆ ಬಳಲುವಿ । ಮರುಳೆ ಹಿಂದೆ ॥

ನಾಗಕಂಜುತ ಸಿಂಹ ಸರಿಗೇ । ನಾಗವಂನಿದಿರಿಸಲು ಭಯವೇ ।
ನಾಗರುಡರ್ಗ ರಂತೆ ನಿನ್ನನು । ನಾ ಗಣಿಸೆನು ॥

ಎನಲು ಕ್ರೋಧದೊಳಾಗ ಪ್ರಬಲನು । ಕಣೆಯನೊಂದನು
ಬಿಡಲು ಗಣಿಸದೆ !
ಕ್ಷಣದಿ ಕಡಿದನು ವೀರಭದ್ರನು । ಕನಲುತದನು ॥

ವೀರಭದ್ರನಿಂತು ರಕ್ಕಸವಡೆಯಂ ಸಂಹರಿಸುತಿರಲ್ಕೆ ಉತ್ಪಲಂ ತಾನೆ ಸಮರಕ್ಕಣಿಯಾಗಲ್ ಷಣ್ಮುಖನಿದಿರ್ವಂದಂ —

Scanned by CamScanner

ರಾಗ ದೂರವಿ ಏಕತಾಳ

ದುರುಳನೆ ನಿಲು ನಿಲು । ಸರಿಯುಲಂ ಬೆನ್ನೆಲು ।
ಮುರಿವೆನು ನೀನಾರು । ಧುರಕಿದಿರಿಸಿ ಹುಲು ।
ಶರಧನು ತಿರುಹಲು । ಸುರಿಸುವೆ ಕೆನ್ನೀರು ॥

ನಾನುತ್ಪಲ ವಿದ । ಲಾನುಜ ಕೋವಿದ ।
ಹೂಣಿಗನಿಹೆ ಜತನ । ನೀನಾರೀ ವಿಧ ।
ಪ್ರಾಣವನೀವುದ । ಕಾನದೆ ಕರೆ ಪಿತನ ॥

ಮಾರಾಂತಕನ ಕು । ಮಾರನು ನಾನು ಕು ।
ಮಾರನು ತಿಳಿಗಿಳೆಯೊ । ಮಾರಕ ದನುಜ ಕು ।
ಲಾರಿಯು ದಿವಿಜ ಕು । ಶಾರನೆ ನೀನುಳಿಯೊ ।

ಧುರದೊಳು ಸುರಪಡೆ । ಗಿರಿಯುತ ಪುರ ಪಡೆ ।
ದಿರುವ ಸಹಸಿಯಿಃಹೆನು । ತರಳನೆ ನಿಲೆ ಪೊಡೆ ।
ದುರುಳಿಸಿ ಜೈಪಡೆ । ಧುರದಿ ಬಲುವೆಂ ತಹೆನು ॥

ಹರಿಯು ಮರಿಯುಃ ಕಿರಿ । ದಿರಲೇನ್ಮದಕರಿ ।
ಬರೆ ತರಿಗದನೊಡನೆ । ಶರಬಿಲು ಸಾಕಿರಿ ।
ವರೆ ನೀ ಮನಕರಿ । ತೊರೆವುದು ಎನ್ನೊಡನೆ ॥

ಹುಡುಗನೆ ಮದಶಿರ । ಕಡರಿತೆ ಬಿಲುಶರ ।
ತೊಡಲರಿಗೇ ನಿನಗೆ । ನುಡಿಯದಿರೀ ತೆರ ।
ಬಿಡು ಧುರದಾತುರ । ನಡೆ ಹಿಂದಕೆ ಮನೆಗೆ ॥

ಮದನಾರಿಯು ಗಿರಿ । ಯಿದು ನೀ ಪಲ್ಗಿರಿ ।
ವುದು ವ್ಯರ್ಥವು ಮರುಳೆ । ಮದಮುಖ ನಿನಗರಿ ।
ಯುದು ನಿಲು ಶರಗುರಿ । ಯಿದಿರಿಸಿ ನೀ ಮರಳೆ ॥

ಭಾಮಿನಿ

ಖಳನಂ ಬಳಿಕೆಸೆಯಲ್ಕೆ ಹಲ ವಿಧ ।
ದಲಗುಗಳ ಖಂಡಿಸಲು ಷಣ್ಮುಖ ।
ನಲಿಸದಾರ್ಭಟಿಸುತ್ತ ದಾನವನೆತ್ತುತಿರೆ ಶರವ ।
ತಿಳಿದು ಬ್ರಹ್ಮನ ವರದ ಬಲ್ಮೆಯಂ ।

ಬಳಲಲೇತಕೆ ಬರಿದೆನುತ ಗುಹ ।
ತೊಲಗೆ ಗಜಮುಖ ಗಜರಿ ದೈತ್ಯನ ತಡೆಯುತಿಂತೆಂದ ॥

ರಾಗ ಭೈರವಿ ಝಂಪೆತಾಳ

ದುಷ್ಟ ದಾನವನೆ ಫಡ । ದಿಟ್ಟತನ ಬೇಡ ಪೊಡ ।
ಮುಟ್ಟು ನಡೆ ನಿಲಲು ಪೊಡ । ಗಟ್ಟಲಾನ್ ಪ್ರೌಢ ॥

ನಡೆಯೆನಾ ನೀ ತೆರಳಿ । ಯೊಡನೆ ಕಳುಹೈತರಲಿ ।
ಮೃಡ. ಗಿರಿಜೆ ಸಹಿತಿರಲಿ । ತಡೆಯದೇ ಬರಲಿ ॥

ಮೃಡ ಗಿರಿಜೆಯರ ಸುದ್ದಿ । ನುಡಿಯಲೇನೆಣಿಸಿದ್ದಿ ।
ಬಿಡದಿರಲು ದುರ್ಬುದ್ಧಿ । ಕೆಡಹುವೆನು ಗುದ್ದಿ ॥

ಕೆಡಹೆ ನಿನಗಸದಳವು । ಹುಡುಗ ನೀನೆಂದೊಲವು ।
ನಡೆ ವಿಧಿಯು ವರಬಲವು । ಕೊಡುಗೆನಗೆ ಗೆಲವು ॥

ಕರಿವದನ ನಾ ವಿಘ್ನ । ತರೆ ವಿಧಿಯು ವರ ಭಗ್ನ ।
ವರಿಯೆಯಾ ನೀನೆನ್ನ । ತರಿಯುವೆನು ನಿನ್ನ ॥

ಗಣಪನೆಂದರಿವೆ ನಾ । ಗಣಿಸೆನಾದರು ನಿನ್ನ ।
ಘನ ವರಕ್ಕಡರೆಣ್ಣ । ಲುಣುವಿ ನೀ ಬನ್ನ ॥

ಭಾಮಿನಿ

ಚಿತ್ರವಿಸಿ ಮುನಿವರರು ಬಳಿಕಾ ।
ದೈತ್ಯನೊಳು ಬಹು ವಿಧದಿ ಸೆಣಸಿ ಸ ।
ಮರ್ಥನಿವ ವರಬಲದೊಳೆನ್ನಿಂದಳಿಯನೆಂದರಿತು ।
ಸ್ವಸ್ಥದಿಂ ಗಜವದನನೈದೆ ಪ ।
ವಿತ್ರಯಂಬಿಕೆ ಗಣರು ಜಯವೆನ ।
ಲಿತ್ತ ಬರಲನುಪಮೆಯ ಕಂಡನು ವಿದಲನಿದಿರಾಂತು ॥

ರಾಗ ಶಂಕರಾಭರಣ ಅಷ್ಟತಾಳ

ಕಂಡನು ವಿದಲಾಸುರನುಪಮೆಯನ್ನು । ಕಂಡನು ॥
ಕಂಡನು ವಿದಲ ತಾನುಪಮೆಯ । ಬ್ರಹ್ಮಾಂಡನಾಯಕಿಯನನುಪಮೆಯ ।
ಭ್ರಮೆ । ಗೊಂಡು ತನ್ನೊಳೆ ತಾನು । ಕೊಂಡಾಡಿಕೊಂಡನು ।
ಭಂಡ ಮದಾಂಧನು । ದ್ದಂಡ ಮಹಿಮಳನಂ ॥ ಪ ॥

ಸರುವ ಸಾಮಾನ್ಯಳಲ್ಲಿವಳು । ನೋಡೆ । ನಿರುಪಮಕಾಂತಿ
ಯಂಳ್ಳವಳು ।
ಬಹು । ತರದ ಪಾಂಡಿತ್ಯ ತೋರ್ವವಳು । ನೋಟ ।
ಕರ ಮನ ಸೆಳೆಯುವ । ಪರಮ ಸೌಂದರ್ಯವ । ಧರಿಸಿದ ಶಿವೆಯಿವ ।
ಳಿರಲದೆ ವೈಭವ ॥ ಕಂಡನು ॥

ಕಮಲದಳಾಯತ ನೇತ್ರೆ । ಎಂಥ । ಕಮನೀಯ ಕನಕ ಸುಗಾತ್ರೆ ।
ಒಳ್ಳೆ । ಕ್ರಮದ ವಿಶಾಲ ಚರಿತ್ರೆ । ವಿ ।
ಕ್ರಮದೊಳೆಂದೆಂಬುದು । ಸಮನೆಂದು ಕಾಂಬುದು ।
ಅಮಮಯೇನೆಂಬುದು । ಗಮನಿಸಲಿಂಬದು ॥ ಕಂಡನು ॥

ಸೃಷ್ಟಿಯೊಳಿಂಥವಳಿಲ್ಲ । ಸರ್ವ । ಶ್ರೇಷ್ಠಳೆಂದೆನಲು ಸುಳ್ಳಲ್ಲ ।
ಸುಪ್ರ । ತಿಷ್ಠೆಯೊಳ್ಳೈಸುವಳೆಲ್ಲ । ಹಿಮ ।
ಬೆಟ್ಟನಣುಗಿಯೆಂಬ । ಸ್ಪಷ್ಟತೆಗನೆಯಿಂಬ । ಕೊಟ್ಟಚೆಲೆಳೆಯೆಂಬ ।
ಗುಟ್ಟರಿಯದೆ ಹುಂಬ ॥ ಕಂಡನು ॥

ಭಾಮಿನಿ

ಅಂಬಿಕೆಯು ಇವಳೆನ್ನ ಗೃಹವನು ।
ತುಂಬಲಾ ಸೌಭಾಗ್ಯಕೆಣೆಯೇ ।
ಶುಂಭ ಮುಖ್ಯರ ಕೊಂದರೇನಾಯ್ತುದಕೆ ನೋಯಿಸೆನು ।
ಸಂಭ್ರಮದಿ ಕರೆದೊಯ್ವೆನೊಲಿಸುತ ।
ಲಂಬನೆತ್ತದೆನುತ್ತ ಖಳನಾ ।
ಡಂಬರದಿ ನುಡಿಸಿದನು ದೇವಿ ಭವಾನಿಯನು ಮುದದಿ ॥

ರಾಗ ಬೇಗಡೆ ಝಂಪೆತಾಳ

ಪರಮ ಮಂಗಲೆ ನಿನ್ನ । ದರುಶನದೊಳಿಂದೆನ್ನ ।
ಹರುಷವೇನೆಂಬೆ ಘನ । ಚರಿತಳೇ ಕೇಳು ।
ಧರಣಿ ಮೂರರೊಳುನ್ನ । ತರ ಗೆದ್ದ ಸಂಪನ್ನ ।
ನಿರುಪ ವಿದಲಾಖ್ಯ ನಾ । ಸುರರೆಸಗೆ ಕೇಳು ॥

ಕೇಳಿ ಬಲ್ಲೆನು ವಿದಲ । ಖೂಳ ನೀನಿಂದು ದಳ ।
ಜಾಲ ಸಹಿತೀ ಪ್ರಬಲ । ಧಾಳಿಗೈದಿತ್ತ ।
ಕಾಳಗಕೆ ನಿತ್ತಗಲ । ಕೇಳಿಸುತಲೀ ಜಗಳ ।
ತಾಳಿದೆಯ ರಣಸೋಲ । ಪೇಳದನು ಧೂರ್ತ ॥

ಬಂದುದಹುದಾನು ರಣ । ಕೆಂದು ಜಯದಾವರಣ ।
ದಿಂದ ಸರಿದಿಲ್ಲ ಕ್ಷಣ । ಹೊಂದೆ ಭಯ ವೀರ ।
ಹಿಂದೆ ಶುಂಭಾದಿ ಘನ । ವಂದಿಗರ ಕೊಂದುದೆನ ।
ಗೊಂದಿತ್ತು ಹಟ ಕಾಣ । ಲಂದಿನಾ ವೈರ ॥

ಸುರರ ಬಾಧಿಸಿದರೆನು । ತರಿದು ಶುಂಭಾದ್ಯರನು ।
ತರಿದುದಹುದಂದಾನು । ಸರಿಯುಬಿಡೆ ಖಳರ ।
ಹರಿ ಹರರ ಮತವನನು । ಸರಿಸಿಯನಾಚರಿಸುವೆನು ।
ಶರಣರನು ರಕ್ಷಿಪೆನು । ಇರಿಯುತಗ್ಗಳರ ॥

ಬಿಡೆನಂತೆ ನಾ ವೈರ । ಕಡು ಸಹಸಿ ರಣವೀರ ।
ದೃಢವಾದರಾನೀಗ । ನುಡಿವುದದು ಬೇರೆ ।
ಪೊಡವಿ ಮೂರರೊಳು ವರ । ಬೆಡಗಿನೀ ನಿನಗೆ ವರ ।
ಮೃಡನು ಸರಿ ಜೊತೆಯೆ ರಸ । ಮಿಡಿದು ಸುಖಬೀರೆ ॥

ನಾಲಿಗೆಯ ಬಿಗಿಹಿಡಿದು । ಹೇಳು ಇಂತೆನೆ ಹೊಡೆದು ।
ಸೀಳಿಬಿಸುಡುವೆ ನಿಮಿಷ । ತಾಳಿ/ನಿಲೆ ನಾನು ।
ಖೂಳತನದಿಂ ನುಡಿದು । ಬಾಳೆ ನೀ ಮುನ್ನಡೆದು ।
ಕಾಳಗಕೆ ನಿಲು ನಿನ್ನ । ಕಾಲಗೀಯುವೆನು ॥

ರಾಗ ಭೈರವಿ ಅಷ್ಟತಾಳ

ಸ್ಪಷ್ಟ ಹೇಳುವೆ ನಿನಗೆ । ನೀನೀಗೊಡ । ಬಟ್ಟರ್ರೊಯ್ವೆನು ಮನೆಗೆ ।
ಪಟ್ಟದರಸಿತನ ಕೊಟ್ಟೆಲ್ಲ । ನೂತನಾ । ಭೀಷ್ಟ ಸಲಿಸುವೆನು ॥

ಮುಚ್ಚು ಮುಚ್ಚ ಧಮ ಬಾಯ । ಆಗಲೆ ನಿನ । ಗೆಚ್ಚರಿಸಿದೆನು ನ್ಯಾಯ ।
ಹುಚ್ಚ ಡರಿತೆ ತಲೆ । ಗುಟ್ಟರಿಸಲು ತಾಳೆ । ಕೊಚ್ಚುವೆ ನಿಮಿಷದಲೆ ॥

ತಪ್ಪೆಂದುದೇನು ನಾನು । ಏನೆಂದೆಣೆ । ಸಿಪ್ಪೆಯಿಾ ವಿದಲನನು ।
ಮುಪ್ಪುರಾರಿಗೆ ಬಿಡೆ । ದರ್ಪದೊಳೆಲ್ಲೆಡೆ । ಯಪ್ಪಳಿಸಿದೆ ಮುಖ್ಯರ ॥

ಹರಗು ನಿನಗು ಸಮವೇ । ಭಾಸ್ಕರನಿದಿ । ರಿರದೋಡುವುದು
ತಮವೇ ।

ಹರಿಗಿದಿರೇ ಹುಲು । ನೊರಜು ಸುಮ್ಮನೆ ಹಲು । ಕಿರಿಯ ದಿರೆಲೆ
ಮೂರ್ಖನೆ ॥

Scanned by CamScanner

ಇಂದ್ರಾದಿಗಳ ಸೋಲಿಸಿ । ಸ್ವರ್ಗವನಾಳು | ತಂದದೊಳಿಹೆ ನೆಲಸಿ ।
ಸುಂದರೀಮಣಿ ನಿನ । ಗೆಂದುದಾನಿದಕೆನ್ನ । ನಿಂದಿಸದೇಳು ಮುನ್ನ ।

ಮತ್ತುಮತ್ತೊದರದಿರು । ಪೇಳ್ದುದನೆ ನೀ | ನಿತ್ತಿನಿತೆನ್ನಿದಿರು ।
ಇತ್ತರೆನಗೆ ದೂರು | ವೃತ್ರಾಂತಕಾದ್ಯರು | ದೈತ್ಯನೆ ಸಹಸದೋರು ॥

ರಾಗ ಭೈರವಿ ಏಕತಾಳ

ಆದರೆ ನಿಲ್ಲೆಂದೆನುತ । ಶರ । ಕ್ರೋಧದಿ ಬಿಡೆ ಖಳನಾಥ |
ಭೇದಿಸಿದಳು ಜಗದಂಬ । ಅವ । ನ್ಯೊದೆಸೆದನು ಬದಲಂಬ ॥

ರುದ್ರಾಣಿಯು ಕಡಿದಿಡಲು | ಖಳ । ನದ್ರಿಕಳಂಬವ ಬಿಡಲು ।
ರೌದ್ರದೊಳದ ವಜ್ರದಲಿ । ಶಿವೆ । ಛಿದ್ರಿಸಿದಳು ನಿಮಿಷದಲಿ ॥

ಭಲೆ ಭಲೆಯೆಂದಾ ಖಳನು | ಬಿಡೆ । ಬಲುಮಯೊಳುರು ಶರಗಳನು ॥
ಗಳಿಲನೆ ಕಡಿದಿಕ್ಕಿದಳು । ಜಯ । ಗಳಿಸಿಯಗಜೆ ಮಿಕ್ಕಿದಳು ॥

ಭಾಮಿನಿ

ದುಷ್ಟ ಖಳ ನೋಡೆನ್ನ ಶಕ್ತಿಯ ।
ನೆಷ್ಟದೆಂದೆನುತಾಗಲಂಬಿಕೆ ।
ಘಟ್ಟನೆಸೆಯಲ್ಕೊಂದು ಶರವುನ್ನಾಕ್ಷಣದೊಳಸುರ ।
ಸೃಷ್ಟಿಗೊರಗಲು ಮೂರ್ಛೆಯಿಂ ಕಂ ।
ಡಷ್ಟರೊಳಗುತ್ಪಲನು ಕ್ರೋಧದೊ ।
ಳಟ್ಟಹಾಸವ ಗೈಯುತಗಜೆಯುನಿದಿರಿಸುತ್ತೆಂದ ॥

ರಾಗ ಶಂಕರಾಭರಣ ಅಷ್ಟತಾಳ

ಭಳಿರೆ ನಾರಿ ಬಲುಮೆಯೇರಿ । ನಲಿವೆ ಭಾರಿ ನಿಲು ವೈಯಾರಿ ।
ಗೆಲುವೆನುತ್ಪಲಾಂಕ ವೈರಿ | ಕುಲಕೆ ನಾ ಹರಿ ॥

ಉತ್ಪಲಾಂಕನಾವರೇನು । ಬಲ್ಪ ನಿಲಿಸಿ ಕೊಲುವರಾನು ।
ಕಲ್ಪಿಸಿರಲು ಬದುಕೆ ನೀನು । ಅಲ್ಪ ಸಹಸನು ॥

ಅಂಬೆ ನೀನು ತಿಳಿಯದೇತ । ಕೆಂಚೆ ತ್ರಿಜಗ ಜೈಸಿದಾತ ।
ನಂಬುವಿದ್ಯೆಗಾಸೆ ದಾತ | ತುಂಬ ಬಲಯುತ ॥

ಶುಂಭ ಮುಖ್ಯ ಖಳರ ಕೊಂದ | ಅಂಬಿಕೆಯ ಪ್ರತಾಪ ಕುಂದ ।
ದೆಂಬುದರಿಯೊ ದನುಜ ಕಂದ | ಹುಂಬ ಬಿಡು ಮದ ॥

ಜಡಜಭವನ ಭಜಿಸಿ ವರವ । ಪಡೆಡೆ ನಾನು ಗೆಲಲು ಸರುವ ।
ಪೊಡವಿಯಲ್ಲಿ ಎನ್ನ ತರಿವ । ದಡಿಗನಾರವ ॥

ಪುರುಷರಿಂದ ಮಾತ್ರ ನಿನಗೆ | ಮರಣ ಬಾರದರಿವೆ ನನಗೆ ।
ತರಿವ ಶಕ್ತಿಯಿಹುದು ಕಣೆಗೆ | ಹಿರಿಮೆ ಬಹು ಬಗೆ ॥

ಮತ್ತೆ ದೈತ್ಯ ತೆಗೆದು ಬಾಣ । ಸುರಿಸಲೆಲ್ಲ ತ್ರಾಣ ।
ವೆತ್ತು ತರಿದಳದನು ಭವನ । ಪತ್ನಿಯಾಕ್ಷಣ ॥

ವಾರ್ಧಿಕ್ಯ

ಮುನಿವರರು ಲಾಲಿಸಿರಿ ದನುಜನೊಡನೀ ತೆರದಿ ।
ಸೆಣಸುತಿರಲಂಬೆ ಗರ್ಜನೆಯಿಂದ ವಿದಲನೆ ।
ದ್ದನುವಾಗಿ ರಣಕೆ ಚಂಡನುಪಮೆಯುಮಾದೇವಿಯೊಣಸು
ತಸುರರೊಳು ಕಾದೆ

ಮುಂನಿದು ಬರಿಸಲ್ಕೆ ಶಾಕಿನಿ ಡಾಕಿನೀ ಬಳಗ ।
ವನು ಭೀಷಣೆಯರು ಬಂದನುಮತಿಯ ಪಡೆದೊಡನೆ ।
ಮಣಿದೇಳುತಾರ್ಭಟಿಸಿ ಕಿನಿಸಿನಿಂ ದೈತ್ಯರಂ ಕೆಣಕಿ ಮುಸುಕುತ್ತೆಂದರು ॥

ರಾಗ ಭೈರವಿ ಏಕತಾಳ

ಮಾತೆಯ ಕೆಣಕಿದಿರೇಕೆ | ಖಳ । ಪಾತಕಿಗಳೆ ನಿಲಿ ಧುರಕೆ ।
ಈ ತೆರ ಬಿಡೆವಾವಿರುತ । ಕುಡಿ | ವಾತುರ ನಿಮ್ಮಯ ರಕುತ ॥

ಆತುರ ಧುರವಾತಿರಲಿ । ಹುಲು । ಭೂತಗಳಿಲ್ಲಿಂ ತೆರಳಿ ।
ಭೀತಿ ಪಡೆವು ನೀಮ್ಮಕಣಕೆ | ಶರ । ವ್ರಾತದಿ ಗೆಲುವೆವು ಕ್ಷಣಕೆ ॥

ಶಾಕಿನಿ ಡಾಕಿನಿ ಬಳಗ । ಈ । ಠೀಕಿನ ಮಾತಿಗೆ ತೊಲಗ |
ಯಾಕೆ ನಲಿವಿರಬ್ಬರದಿ | ಕೊಂ । ದೀ ಕಡೆಗೆಳೆವೆವು ಭರದಿ ॥

ಬರಿದೇ ಬಗುಳುವಿರೇಕೆ । ವಿಧಿ | ವರಬಲವಿರ್ಪುದು ಧುರಕೆ ।
ಹರಿಹರಬ್ರಹ್ಮರೆ ಬರರು | ಎನೆ । ಧರಣಿಯೊಳೆಮಂಗಿದಿರಾರು ॥

ಬ್ರಹ್ಮನ ವರವಿಹುದೆನುತ । ಒಣ | ಹಮ್ಮೇರಿದುದಿರಲನಿತ |
ಎಮ್ಮೊಳು ಮೆರೆಸಲು ಜೈಸ । ಅದು । ಹೆಮ್ಮಕ್ಕಳಿಗನ್ವಯಿಸ ॥

ಕೊಲ್ಲಲು ನಿಮ್ಮನಸಾಧ್ಯ । ಎಂ । ದಲ್ಲದೆ ಮತ್ತೇನ್ಸದ್ಯ ।
ಗೆಲ್ಲುತಲಟ್ಟಲು ತ್ರಾಣ । ನ । ಮ್ಮಲ್ಲಿದೆ ಬಿಡುವೆವು ಬಾಣ ॥

ಪರಿಕಿಸಿ ಬಾಣವ ಬಿಟ್ಟು । ಫಲ । ವಿರದೀತೆರ ಬೊಬ್ಬಿಟ್ಟು ।
ಶರಬರಲೆಮಗದು ತೃಣವು । ಮೆಲ । ಲಿರುವುದು ನಿಮ್ಮೌತಣವು ॥

ಕೇಳುತದನು ಕ್ರೋಧದಲಿ । ಆ । ಖೂಳರು ಶರವೆತ್ತುತಲಿ ।
ತಾಳಿರೆನುತ ಬಿಡಲವರು । ಬಹ । ಕೋಲುಗಳಂ ಸವರಿದರು ॥

ಭಾಮಿನಿ

ಭಂಡ ದೈತ್ಯರು ಬಳಿಕಲಾಶುಗ ।
ತಂಡದಿಂ ಮುಸುಕಲ್ಕೆ ಸಹಿಸದ ।
ಭಂಡ ಶಕ್ತಿಗೆ ಬಳಲಿ ಶಾಕಿನಿ ಮುಖ್ಯರಡಗಲದ ।
ಕಂಡಗಡ ಖತಿಗೊಂಡು ಕ್ಷಣದಿ ಪ್ರ
ಚಂಡ ಚಂಡಿಕೆ ರೂಪದಿಂ ಬ್ರ ।
ಹ್ಮಾಂಡ ನಡುಗಲ್ದಂಡಿಸುವೆನೆಂದೊರೆದಳಸುರರಿಗೆ ॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ಭಂಡ ದೈತ್ಯಾಧಮರೆ ಬಹಳ ಪ್ರ । ಚಂಡರಾದಿರೆ ನೋಡಿರೆನ್ನಯ ।
ಖಂಡ ಶಕ್ತಿಯ ತಿಳಿಯಿರೇ ಈ । ಚಂಡಿಕೆಯನು ॥

ಚಂಡಿಕೆಯು ನೀನಾದರೇನು । ದ್ದಂಡ ಸಹಸಿಗಳಿರ್ಪೆವೆಮ್ಮನು ।
ದಂಡಿಸಲ್ಕಳವಲ್ಲ ಗೆದ್ದೆವ । ಜಾಂಡವೆಲ್ಲ ॥

ಬ್ರಹ್ಮ ನಿರ್ಮಿತ ಜಗವ ದಂಡಿಸಿ । ಧರ್ಮಬಾಹಿರರಾದ ನೀವು ಕು ॥
ಕರ್ಮಿಗಳು ನಿಮಗಂತ್ಯವಿದು ವಿಧಿ । ಸಮ್ಮತದಲೆ ॥

ದಂಡವಾರ್ಹರ ಬಿಡೆನೆನುತಲಾ । ಚಂಡಿಕೆಯು ಚೆಂಡಿನಲಿ ಬಡಿದು ಪ್ರ ।
ಚಂಡ ದೈತ್ಯರ ಕೆಡಹಿದಳು ಭೂ । ಮಂಡಲಕ್ಕೆ ॥

ಖಂಡಿಸುತ ಮತ್ತವರ ರುಂಡವ । ಚೆಂಡಿನಂತಾಡುತಿರೆ ದಿವಿಜರ ।
ಖಂಡಶಕ್ತಿಯ ಪ್ರಾರ್ಥಿಸಿದರು । ದ್ದಂಡ ಮಣಿದು ॥

ವಾರ್ಧಿಕ್ಯ

ಜಯತು ಮಹಮಾಯೆ ಜಯ ಜಯತು ಶಿವಜಾಯೆ ಜಯ ।
ಜಯ ಜಯತು ಶುಭಕಾಯೆ ಜಯ ಜಯತು ಕಮನೀಯೆ ।
ಜಯತು ದಿಗ್ವಿಜಯೆ ಜಯ ಜಯತು ಗಿರಿನಿಲಯೆ ಜಯ ।
ಜಯತು ಜಯ ಜಯತು ಜಯತು ।
ಜಯತು ಮಹಿಷಘ್ನೆ ಜಯ ಜಯತು ರವಿಕಾಂತೆ ಜಯ ।
ಜಯತು ಭುವನೇಶೆ ಜಯ ಜಯತು ಭವಾನೀಶೆ ಜಯ ।

ಜಯತು ನಿರ್ದೋಷೆ ಜಯ ಜಯತು ಖಳದೂಷೆ ಜಯ
ಜಯ ತಾಯೆ ಜಯತು ಜಯತು ॥

ರಾಗ ಮಧ್ಯಮಾದಿ ತ್ರಿವುಡೆ ತಾಳ

ಇಂತು ಪ್ರಾರ್ಥಿಸಲಮರರಂಬಿಕೆ । ಸಂತಸದಿ ಸೌಮ್ಯಾಕೃತಿಯ ತಳೆ ।
ದಾಂತ ಚೆಂಡಿಂ ಖಳರ ಕೊಂದೆ ಮಹಾಂತಮಹಿಮೆಯ
ದುರುಳಿಪೆ । ನಿಂತಿದತ್ತ ॥

ಕಾಶಿಯೊಳು ವರ ಕುಂದಕೇಶ್ವರ । ವಾಸಲಿಂಗವೆನುತ್ತ
ಮೆರೆದಂ ವಿಶೇಷ ಶಕ್ತಿಯ ಫಲವ ಕೊಡಲೆಂ ।
ದಾಶಿಸುವೆನೆನುತೊರೆಯುತ । ಲೇಸನೆಣಿಸಿ ॥

ಹರಸುತವಮರರ ಕಳುಹಿ ಸ್ವರ್ಗಕೆ । ಗಿರಿಜೆ ಗಣರೊಡನೈದಿ
ಪರಮೇಶ್ವರನ ಬಳಿಕೆಲ್ಲವನು ಪೇಳುತ ।
ಪೊರೆಯಂತಿರ್ದಳು ಶರಣರ । ಕರುಣದಿಂದ ॥

ಸೂತಶೌನಕ ಮುನಿಗಳಿಗೀ ತೆರದಿ ಬಣ್ಣಿಸಿದ ಚರಿತೆಯ । ಖ್ಯಾತ
ಕೀರಿಕ್ಕಾಡು ದೋಷಕೆ ।
ಭೂತಳಾಮರ ವಿಷ್ಣುವು । ಸಾತಿಶಯದಿ ॥

ವಿರಚಿಸಿದನೀ ಯಕ್ಷಗಾನದಿ । ಪರಮ ಮುನಿಪುರದೊಡೆಯ ಕೃಷ್ಣನ ॥
ಕರುಣದಿಂದಲಿ ಕನ್ನಡಾಂಬೆಯಂ । ಚರಣ ಸೇವೆಯೆನುತ್ತಲಿ ।
ಮೆರೆಸಿರೆಲ್ಲ ॥

ಮಂಗಲ ಪದ

ರಾಗ ರೇಗುಪ್ತಿ ಅಷ್ಟತಾಳ

ಮಂಗಲಂ । ಜಯ । ಮಂಗಲಂ ॥ ಮಂಗಲ ಶ್ರೀ ಗೋಪಾಲನಿಗೆ ।
ಮಂಗಲ ತುಳಸೀಮಾಲನಿಗೆ । ಮಂಗಲಂ ಜಯ ಮಂಗಲಂ ॥ ಪ ॥

ಗಿರಿಜಾ ರಮಣನ ಮಿತ್ರನಿಗೆ । ಗರುಡ ಗಮನ ಸುಪವಿತ್ರನಿಗೆ ।
ಸರಸಿಜ ನೇತ್ರಗೆ । ಸುರಕುಲ ಸ್ತೋತ್ರಗೆ । ಸುರುಚಿರ ಸುಂದರ
ಗಾತ್ರನಿಗೆ ।

ಮಂಗಲಂ । ಜಯ । ಮಂಗಲಂ ॥

ಹತ್ತವತಾರವನೆತ್ತಿದಗೆ । ಮತ್ತ ಬಲೀಂದ್ರನನೊತ್ತಿದಗೆ ।
ಭಕ್ತ ಜನರ ಮನ । ದರ್ತಿಯನನುದಿನ ।
ಇತ್ತು ಪೊರೆವ ಗೋವರ್ಧನಗೆ ॥

ಮಂಗಲಂ । ಜಯ । ಮಂಗಲಂ ॥

ಸನಕ ಸನಂದನ ಪೂಜಿತಗೆ । ದಿನಮಣಿ ಕೋಟಿ ವಿರಾಜಿತಗೆ ।
ಮನುಮಥ ಪಿತನಿಗೆ । ಘನ ಸುಚರಿತನಿಗೆ । ಮುನಿಪುರ ಸ್ಥಿರ
ಶ್ರೀ ಕೃಷ್ಣನಿಗೆ ॥

ಮಂಗಲ ಶ್ರೀ ಗೋಪಾಲನಿಗೆ । ಮಂಗಲ ತುಳಸೀ ಮಾಲನಿಗೆ ।
ಮಂಗಲಂ । ಜಯ । ಮಂಗಲಂ ॥

ಭದ್ರಂ — ಶುಭಂ — ಮಂಗಲಂ

ಸುಲಭಾ ಮುದ್ರಣಾಲಯ, ಕೋಟೇಶ್ವರ, ಉಚ್ಚಿಲ — ಫೋನ್: 6275

ಹಿನ್ನುಡಿ

ಐದು ದಶಕಗಳಿಗಿಂತಲೂ ಹೆಚ್ಚು ಕಾಲ ಯಕ್ಷಗಾನ ಕಲೆಯ ಆರಾಧನೆಯಲ್ಲಿ ಜೀವನ ಸವೆಸಿ ಯಶಶ್ಶೋಭಿತರಾದ ಕೀರಿಕ್ಕಾಡು ಮಾಸ್ಟರ್ ವಿಷ್ಣು ಭಟ್ಟರ ಯಕ್ಷಗಾನ ಪ್ರಸಂಗ ಅಂಬಿಕಾ ಮಹಾತ್ಮ್ಯೆಗೆ ಹಿನ್ನುಡಿಯ ಅವಶ್ಯಕತೆಯಿದೆಯೆಂದು ನನಗನ್ನಿಸುವುದಿಲ್ಲ. ಆದರೂ ಡಾ॥ ಬನಾರಿಯವರು ರೂಢಿಯನ್ನು ಬಿಡಲು ಸಿದ್ಧರಿಲ್ಲದೆ ನನ್ನಿಂದ ಈ ಹಿನ್ನುಡಿಯ ನಾಲ್ಕು ಮಾತುಗಳನ್ನು ಬರೆಸುತ್ತಿದ್ದಾರೆ.

ಶ್ರೀ ವಿಷ್ಣು ಭಟ್ಟರು ಪ್ರಸಂಗ ಕರ್ತರಾಗಿ, ಕಾದಂಬರಿಕಾರರಾಗಿ, ಲಲಿತ ಪ್ರಬಂಧಕಾರರಾಗಿ ಸಾಹಿತ್ಯ ಮತ್ತು ಯಕ್ಷಗಾನ ಎರಡೂ ಕ್ಷೇತ್ರಗಳಲ್ಲಿ ಹೆಸರಾಂತವರು. ಕಲಾರಾಧನೆಯಲ್ಲಿ ಅವರು ಎಷ್ಟು ಸಿದ್ಧಪ್ರಸಿದ್ಧರೊ, ಅನ್ನ ಬಟ್ಟೆ ಕೊಟ್ಟು ಕಲಾವಿದರನ್ನು ಸಿದ್ಧಪಡಿಸುವುದರಲ್ಲಿಯೂ ಅವರಂಥವರು ಅವರೊಬ್ಬರೆ.

ಈಗಾಗಲೇ ಅವರು ಬರೆದು ಪ್ರಕಟಿಸಿದ ಪ್ರಸಂಗಗಳು, ರಂಗಸ್ಥಳದಲ್ಲಿ, ಕೂಟಗಳಲ್ಲಿ ಯಶಸ್ಸು ಕಂಡಿವೆ. ಅವುಗಳ ಜೊತೆಗೆ ಈಗ ಪ್ರಕಟಗೊಳ್ಳುತ್ತಿರುವ ಅಂಬಿಕಾ ಮಹಾತ್ಮ್ಯೆ ಆ ಯಶಸ್ಸಿಗೆ ಮತ್ತೊಂದು ಮೆರುಗು. ಇಲ್ಲಿನ ಕಥೆ ನಮಗೆ ಮುಖ್ಯವಾಗದಿದ್ದರೂ ವಿಷ್ಣು ಭಟ್ಟರ ಪದಬಂಧ, ಪ್ರಾಸಪ್ರೀತಿ, ದೇಸಿಯ ಬಳಕೆ, ಅವರ ಅನ್ಯಾದೃಶ ಪ್ರತಿಭೆಗೆ ಕನ್ನಡಿ ಹಿಡಿಯುತ್ತದೆ. ಅವರು ಹೆಣೆಯುವ ಸಂಭಾಷಣಾ ಚಾತುರ್ಯ ಕೂಟಗಳಲ್ಲಿ ಅವರು ತೋರಿಸುತ್ತಿದ್ದ ಸಮಯಸ್ಫೂರ್ತಿಯ ಮಾದಶ್ಶೈಲಿಯನ್ನೇ ಪ್ರತಿಬಿಂಬಿಸುತ್ತವೆ. ಹೊಸ ಕಾಲದಲ್ಲಿ ಪ್ರಸಂಗಗಳು ಅಣಬೆಗಳಂತೆ ಹುಟ್ಟುತ್ತವೆ, ಅವುಗಳಲ್ಲಿ ಬಾಳಿಕೆ ಬರುವಂಥವು ಎಲ್ಲೋ ಕೆಲವು. ಅಂಬಿಕಾ ಮಹಾತ್ಮ್ಯೆ ಗಟ್ಟಿ ಬಣ್ಣದ ಕೃತಿಯೆಂಬುದರಲ್ಲಿ ಅನುಮಾನವೇ ಇಲ್ಲ.

—ರಾಮಚಂದ್ರ ಉಚ್ಚಿಲ

Scanned by CamScanner